ಅಪರಂಜಿ

ಸಂಪುಟ-೫
ಸಂಚಿಕೆ-೪
ಜನವರಿ 1988

ತಿಳಿನಗೆಯ ಕಾರಂಜಿ



- ಆನಂದ್
- ಎಂ. ವಿ. ಸೀ.
- ಆಮಲಕ
- ಜಿ. ಎನ್. ಜಿ.
- ಶಿವು
- ಬಿ. ಎಸ್. ಚಂದ್ರಶೇಖರ್
- ಲೀಲಾ ಮಿರ್ಲೆ
- ನಾ. ಕಸ್ತೂರಿ
- ದುರ್ವಿನೀತ
- ಜಿ. ರಾಮಣ್ಣ ಆಲೆಟ್ಟಿ
- ಸ. ಹಾಲಪ್ಪ
- ಗುರುವ

ಬಿಡಿಪತ್ರಿಕೆ :ಕೇವಲ ಒಂದೂವರೆ ರೂಪಾಯಿ



(ತಿಳಿನಗೆಯ ಕಾರಂಜಿ)

ಸಂಪುಟ ೫ ಜನವರಿ ೧೯೮೮ ಸಂಚಿಕೆ ೧

ಚಂದಾ ವಿವರ :

ಬಿಡಿ ಪ್ರತಿ
ಒಂದೂವರೆ ರೂಪಾಯಿ

ವಾರ್ಷಿಕ ಚಂದಾ . 15 ರೂ.

ಆಜೀವ ಚಂದಾ 150 ರೂ.

ಪೋಷಕರು 500 ರೂ.

ಗೌರವ ಸಲಹೆಗಾರರು :

ಶ್ರೀ ಅ. ರಾ. ಸೇ.

ಶ್ರೀ ಶೇಷಗಿರಿ

ವಿಳಾಸ :

ಅಪರಂಜಿ ಕಾರ್ಯಾಲಯ
119 [ಹಳೆಯ 36],
6ನೆ ಮುಖ್ಯ ರಸ್ತೆ,
ಮಲ್ಲೇಶ್ವರಂ,
ಬೆಂಗಳೂರು 560003

ಸಂಪಾದಕ

ಶಿವಕುಮಾರ್

ತಿಂಗಳ ಹಳೆಯ ಜೋಕು.

ಶಿವಾಲಯದಲ್ಲಿ ಒಮ್ಮೆ "ತುಂಬಾ ಛಳಿಯಾಗುತ್ತೆ ಯಾಕೋ" ಅಂದಳಂತೆ ಗಿರಿಜೆ ನಡುಗುತ್ತಾ. "ಹಿಮಗಿರಿ ತನಯೆ, ನಿನಗೆ ಇಲ್ಲಿ ಛಳಿ ಅಂದರೆ ನಂಬುಕ್ಕಾಗುಲ್ಲ" ಎಂದನಂತೆ ಈಶ್ವರ. ಮುಂದುವರಿದು ಗಂಗೆಯನ್ನು ತೋರಿಸಿ "ನೋಡು ಅವಳೇನಾದರೂ ಛಳಿ ಅಂತ ನಡುಗುತ್ತಾ ಇದ್ದಾಳೆಯೇ? ಹಾಡುತ್ತಾ ತುಳುಕಾಡುತ್ತಿದ್ದಾಳೆ" ಎಂದು ಹೇಳಿದ.

ಸವತಿ ಮತ್ಸರದಿಂದ ಕುದಿಯ ಹತ್ತಿದ ಗಿರಿಜೆಯು ನಡುಗುವುದನ್ನು ನಿಲ್ಲಿಸಿ ಕೆಂಪಾದಳಂತೆ.

ಈ ಸಂಚಿಕೆಯಲ್ಲಿ......

ಲೇಖನ	ಲೇಖಕ/ಲೇಖಕಿ	ಪುಟ
ಅಪರಂಜಿ ಕಿಡಿ	ಆನಂದ್	4
Grease ಹಾಕೋ ಜಾಣ್ಮೆ	ಎಂ. ವಿ. ಸೀ.	6
ವಕ್ರ ದೃಷ್ಟಿ	ಆಮಲಕ	8
ಮುನ್ನೆಚ್ಚರಿಕೆ	ಬಿ. ಎಸ್. ಚಂದ್ರಶೇಖರ್	11
ಸನ್ಯಾಸ	ಲೀಲಾ ಮಿರ್ಲೆ	15
ಶ್ರೀರಂಗಪಟ್ಣ	ನಾ. ಕಸ್ತೂರಿ	17
ನಂ ಕ್ಲಬ್ಬಿನಲ್ಲಿ	ಆನಂದ್	19
ಇಂದುಮತಿ	ಶಿವು	20
ಕ್ರಿಕೆಟ್ ಹೀಗಾದರೆ !	ದುರ್ವಿನೀತ	24
ಅ(ನ)ರ್ಥಕೋಶ	ಸ. ಹಾಲಪ್ಪ	27
ಕಾನ್ವೆಂಟ್ ಕನ್ನಡ	ಜಿ. ರಾಮಣ್ಣ ಆಲೆಟ್ಟಿ	28
ಕ್ರಿ. ಶ. 2003ರಲ್ಲಿ ರಾಜ್ಯದಲ್ಲಿ ಇದೇ ಪರಿಸ್ಥಿತಿ ಇದ್ದರೆ ?	ಜಿ. ಎನ್. ಜಿ.	30
ದಿಬ್ಬಣದ ಊಟ	ಗುರುವ	34

ವ್ಯಂಗ್ಯ ಚಿತ್ರಗಳು : ಬಾಗೂರು ಮಾರ್ಕಾಂಡೇಯ

ಮುದ್ರಣ : ಇಂಪ್ರೆಷನ್ಸ್, ಬೆಂಗಳೂರು-3 ದೂರವಾಣಿ : 362989, 363444

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೫ ಜನವರಿ ೧೯೮೮ ಸಂಚಿಕೆ ೪

ಮಾವಟಿಗ ಈ ಎಂಜಲು ಹುರುಳಿಯನ್ನು ತಿಂದೆ. ನೀರು ಬೇಡ ವೆನ್ನುತ್ತೀ ! ಅದನ್ನು ಎಂಜಲು ಎನ್ನುತ್ತೀ !

ಉಷಸ್ತಿ ಅದನ್ನು ತಿನ್ನದಿದ್ದರೆ ಬದುಕುತ್ತಲೇ ಇರಲಿಲ್ಲ.

—ಛಾಂದೋಗ್ಯ

ಪ್ರಾಣೋಪಾನಕನು ಏನನ್ನು ತಿಂದರೂ ತಪ್ಪಿಲ್ಲ ಎಂದು ಹೇಳಲು ಉಷಸ್ತಿ ಚಾಕ್ರಾಯಣನ ಕತೆ ಬಂದಿಲ್ಲ. ಪ್ರಾಣವನ್ನುಳಿಸಿಕೊಳ್ಳಲು, ಅದಕ್ಕೆ ಸಾಕಾಗುವಷ್ಟು ಮಾತ್ರ ಎಂತಹ ಆಹಾರವನ್ನು ಬೇಕಿದ್ದರೂ ತಿನ್ನಬಹುದು ಎಂದು ಇದರ ಅಭಿಪ್ರಾಯ. ಹಿಂದೆ ಬರಪೀಡಿತವಾದ ಕುರು ದೇಶದಲ್ಲಿ ಉಳಿದ ಬೆಳೆಯನ್ನು ಮಿಡತೆಗಳು ತಿಂದಾಗ ಉಷಸ್ತಿ ಚಾಕ್ರಾಯಣನೆಂಬ ಋಷಿಯು, ಮಾವಟಿಗನೊಬ್ಬನಿಂದ ಎಂಜಲು ಹುರುಳಿಯನ್ನು ಬೇಡಿ ಪಡೆದು ತಿಂದನು. ಆದರೆ ನೀರನ್ನು ಕುಡಿಯಲಿಲ್ಲ.

ಈಗಲೂ ಬರ ಬಂದಿದೆ. ಆದರೆ ಕಾಲಚಕ್ರದ ಉರುಳಿನಲ್ಲಿ ಕೈಲಾದವರು, ಅಧಿಕಾರವಿರುವವರು ಕೋಟಿಗಟ್ಟಲೆ, ಅಷ್ಟಾಗದವರು ಲಕ್ಷಾಂತರ ತಿನ್ನುತ್ತಾರೆಂಬ ಹುಯಿಲಿದೆ. ಅದು ಸುಳ್ಳಿದ್ದರೆ ಸಂತೋಷವೇ. ಆದರೆ ಬಲವಂತದಿಂದ ಬೇಡಿ ಹಾರುವ ತರಕಾರಿಯನ್ನೂ ಬೀರನ್ನೂ ಸ್ವಾಹಾಕಾರ ಮಾಡುವವರು ಎಲ್ಲೆಲ್ಲೂ ತುಂಬಿದ್ದಾರೆ. ಅದಕ್ಕೇ ಅವರಿಗೆ ಉಪನಿಷತ್ತುಗಳಲ್ಲಿ ಅಷ್ಟಾಗಿ ನಂಬಿಕೆ ಇಲ್ಲ ಎನ್ನುವಿರಾ ? ಹಾಗಲ್ಲ, ತಾವು ಏನನ್ನೂ ಅರಿಯದ ತಮ್ಮದನ್ನು ಬೈದು, ಏನೂ ಅರಿಯದ ಇತರರದನ್ನು ಹೊಗಳುವುದು ಫ್ಯಾಷನ್. ಕಾಲಕ್ಕೆ ತಕ್ಕಂತಿರಬೇಕು !

ಅಪರಂಜಿ ಕಿಡಿ

—ಆನಂದ್

ಯಾರವೇ ಒತ್ತಡದಿಂದ ರೂಪಾಯಿ ಅಪಮೌಲ್ಯ ಇಲ್ಲ.

—ಶ್ರೀ ತಿವಾರಿ

ಹೌದು, ಅದು ತಾನಾಗಿಯೇ ಅಪಮೌಲ್ಯಗೊಳ್ಳುತ್ತೆ !

*　*　*　*

ಕೈಗಾ ಅಣುಸ್ಥಾವರ ವಿವಾದದ ಸುಳಿಯಲ್ಲೇ ಕೊಚ್ಚಿ ಹೋಗುತ್ತೇನೋ ಅಂತ ಅಪರಂಜಿ ನಕ್ಕಳಂತೆ !

*　*　*　*

ನಗರಕ್ಕೆ ಎಂಟು ಸಾವಿರ ಹೊಸ ಟೆಲಿಫೋನ್‌ಗಳು.

—ಸುದ್ದಿ

ಅಬ್ಬಬ್ಬ ! ಇನ್ನು ಸಾವಿರಾರು ರಾಂಗ್ ನಂಬರ್‌ಗಳ ಸಾಧ್ಯತೆ !

*　*　*　*

ಒಂದೊಂದು ಸಂಸಾರದಲ್ಲಿ ಎರಡೇ ಮಕ್ಕಳು.

—ಶ್ರೀ ಹೆಗಡೆ ಸಲಹೆ

ಈಗ ನಾನೇನು ಮಾಡ್ಲಣ್ಣ ಅಂತ ನಂ ಮೂರನೇ ಮಗ ನಾಣಿ ಒದ್ದಾಡ್ತಿದಾನೆ!

*　*　*　*

ಇಂಡಿಯನ್ ಎಕ್ಸ್‌ಪ್ರೆಸ್ ಮೇಲಿನ ದಾಳಿ ಸುದ್ದಿ ಕೇಳಿ, ಅಪರಂಜಿ ಸದ್ಯ ದೆಹಲೀಲಿ ಯಾರಿಗೂ ಕನ್ನಡ ಬರುಲ್ಲವಲ್ಲ ಅಂತ ಸಮಾಧಾನಪಟ್ಟಳಂತೆ !

*　*　*　*

ಟೆಸ್ಟ್ ಟ್ಯೂಬ್ ಆಲೂಗೆಡ್ಡೆ ತಯಾರಿಕೆ.

—ಸುದ್ದಿ

ಹೌದೇ ? ಮೊನ್ನೆ ನಾವು ತಿಂದ ಪಲ್ಯಕ್ಕೂ ಅನಾಥ ರುಚಿಯೇ ಇತ್ತು !

* * * *

ತಿಂಗಳಿಗೊಮ್ಮೆ ರಾಜಕೀಯ ಘಟನೆಗಳ ವಿಡಂಬನಾತ್ಮಕ ಲೇಖನ ಇದ್ದರೆ ಉತ್ತಮ

—ಅಪರಂಜಿ ಓದುಗರ ಪ್ರತಿಕ್ರಿಯೆ

ನಂ ದೇಶದ ರಾಜಕೀಯವೇ ವಿಡಂಬನೆ; ಅದನ್ನ ಕುರಿತು 'ವಿಡಂಬನಾತ್ಮಕ' ಹೇಗೆ ಮಾಡೋದು ಸ್ವಾಮಿ ?



ಸ್ವರ್ಗದ ಸೀಟಿಗೆ ಡೊನೇಷನ್ ಕೊಡುಕ್ಕೆ ಹೋದರೆ ಇನ್ನೇನಾಗುತ್ತೆ ?

6

Grease ಹಾಕೋ ಜಾಣ್ಮೆ

— ಎಂ.ವಿ.ಸೀ.

ನಮ್ಮ ಮನೆಯ ಮಳಿಗೆ ಒಂದಕ್ಕೆ ಹೊಸದಾಗಿ ರೋಲಿಂಗ್ ಷಟರ್ ಹಾಕಿಸಿತ್ತು. ಅದು ಸ್ವಲ್ಪ ಕೆಟ್ಟು ಹೋಗಿತ್ತು. ಉಕ್ಕಿನ 'ಗಾಡಿ' ಗಳಿಗೆ ಜಿಡ್ಡು (ಗ್ರೀಸ್) ಹಾಕಿ, ಷಟರ್ ಸಲೀಸಾಗಿ ಚಲಿಸುವಂತೆ ಮಾಡಿಕೊಡಲು ಒಬ್ಬ ಯಂತ್ರ ಕಾರ್ಮಿಕ ಬಂದಿದ್ದ. ಕೆಲಸ ಮಾಡುವಾಗ ಅದು ಇದು ಮಾತಾಡುತ್ತ, ಒಂದೇ ಕಡೆಗೆ ಬೀಗ ಹಾಕಬೇಡಿ ಎರಡೂ ಕಡೆಯ ಕೊಂಡಿಗಳಿಗೂ ಬೀಗ ಹಾಕಿ ಎಂದು ಸೂಚಿಸಿದ. ಹಾಗೆ ಮಾಡದೆ ಹೋದರೆ ಕಳ್ಳರು ಸುಲಭವಾಗಿ ಷಟರ್ ಒಡೆದು ಒಳಗೆ ನುಗ್ಗಲು ಅವಕಾಶವಾಗುತ್ತದೆ ಎಂದು ವಿವರಿಸಿದ.

ಈ ಮಳಿಗೆಯನ್ನು ತತ್ಕಾಲಕ್ಕೆ ನಾನು ಬಿ. ಎಂ. ಶ್ರೀ. ಪ್ರತಿಷ್ಠಾನದ ಕಾರ್ಯಾಲಯಕ್ಕೆ ಬಿಟ್ಟುಕೊಟ್ಟಿದ್ದೆ. "ಮಳಿಗೆಯಲ್ಲಿ ಏನಿದೆ ಕಳ್ಳರು ಬಂದು ಕದ್ದುಕೊಂಡು ಹೋಗುವುದಕ್ಕೆ ? ಎಲ್ಲಾ ಪುಸ್ತಕಗಳು" ಎಂದು ನಾನು ನಿರಾತಂಕವಾಗಿ ನುಡಿದೆ. ಕಾರ್ಮಿಕ ಹೇಳಿದ "ಅಲ್ಲ ಸ್ವಾಮಿ, ನಾನು ನಿತ್ಯ ಇಲ್ಲಿ ಓಡಾಡುತ್ತೀನಿ. ಯಾವಾಗಲೂ ಷಟರ್ ಹಾಕಿರುತ್ತೆ. ಕಳ್ಳರಿಗೆ ಒಳಗೆ ಪುಸ್ತಕ ಇದೆ ಅಂತ ಏನು ಗೊತ್ತು ? ರೋಲಿಂಗ್ ಷಟರ್ ಹಾಕಿಸಿರಬೇಕಾದರೆ ಬಂದೋಬಸ್ತಿಗೆ ಹಾಕಿದ್ದಾರೆ. ಅಂಗಡಿ ಇರಬಹುದು. ಏನಾದರೂ ಸಿಕ್ಕೇ ಸಿಕ್ಕುತ್ತೆ ಅಂತ ಒಡೀಬಹುದು. ಅವರಿಗೆ ಏನೂ ಸಿಕ್ಕದೆ ಹೋದರೂ, ನಿಮ್ಮ ರೋಲಿಂಗ್ ಷಟರ್ ನಾದುರಸ್ತಾಯಿತೋ ? ಮತ್ತೆ ನಾನೇ ಗತಿ ನಿಮಗೆ. ಮತ್ತೆ ನನಗೆ ಮಜೂರಿ. ನಡೆದ ಸಂಗತಿ ಒಂದು ತಿಳಿಸ್ತೀನಿ, ಕೇಳಿ. ಹೇಗೆ ಅನಾಹುತ ಆಗಬಹುದು ಅಂತ ಗೊತ್ತಾಗುತ್ತೆ.

"ನೋಡಿ, ನಮ್ಮ ಊರಿನಲ್ಲಿ ಒಂದು ಮದುವೆ ಆಯ್ತು. ನಮ್ಮ ನಂಟರದ್ದು. ಎರಡು ಹೆಣ್ಣು ಮದುವೆ ಒಟ್ಟಿಗೆ ಆಯ್ತು. ಅಳಿಯಂದಿರು ಇಬ್ಬರು ತಮ್ಮ ಹೊಸ ಹೆಂಡಿರನ್ನು ಕರಕೊಂಡು ರೈಲಿನಲ್ಲಿ ಪ್ರಯಾಣ ಮಾಡಿದರು. ಅಳಿಯಂದಿರಿಗೆ ಎರಡು ಬುಟ್ಟಿ ತುಂಬ ತಿಂಡಿ ಪಂಡಿ ಏನೇನೋ ತುಂಬಿ ಕೊಟ್ಟು ಕಳಿಸಿದ್ದರು, ಅತ್ತೆ ಮನೆಯವರು. ಇಬ್ಬರು ಅಳಿಯಂದಿರೂ ಪ್ರಯಾಣ ಮಾಡುತ್ತ ಇರೋವಾಗ, ಬುಟ್ಟಿಯ ಪದಾರ್ಥಗಳನ್ನು ತೆಗೆದುನೋಡಿ, ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಿದ್ದರು. ಹಾಗೆ ಮಾತಾಡುವಾಗ, ಒಬ್ಬ ಅಳಿಯ, 'ನಿನಗೆ ಎಷ್ಟು ಕೊಟ್ಟಿದ್ದಾರೆ?'

ಎಂದು ಕೇಳಿದ. ಇನ್ನೊಬ್ಬ ಅಳಿಯ, 'ನನಗೆ ಇನ್ನೂರ ಐವತ್ತು ಕೊಟ್ಟಿದ್ದಾರೆ. ನಿನಗೆ ಎಷ್ಟು ಕೊಟ್ಟಿದ್ದಾರೆ ?' ಎಂದು ಇವನಿಗೆ ಪ್ರಶ್ನೆ ಹಾಕಿದ. ಇವನು, 'ನನಗೆ ಇನ್ನೂರು ಕೊಟ್ಟಿದ್ದಾರೆ' ಎಂದ ಹೀಗೆ ಪಕ್ಷಪಾತ ಮಾಡಬಾರದಾಗಿತ್ತು. ಇಬ್ಬರಿಗೂ ಒಂದೇ ಸಮ ಕೊಡಬೇಕಾಗಿತ್ತು, ಎಂದು ತನ್ನ ಅಸಮಾಧಾನ ತೋರಿಸಿದ. 'ಹೌದು, ಹೌದು. ಊರಿಗೆ ಹೋದ ಮೇಲೆ ನಾವು ಸಮನಾಗಿ ಹಂಚಿಕೊಂಡರಾಯಿತು. ಅದೇನು ಮಹಾ ದೊಡ್ಡ ವಿಷಯ' ಎಂದು ಎರಡನೇ ಅಳಿಯ ಸಮಾಧಾನದ ಮಾತು ಹೇಳಿದ. ಅಲ್ಲಿಗೆ ಮಾತು ನಿಂತಿತು. ರಾತ್ರಿ ಆಯಿತು.

ಇವರ ಮಾತನ್ನು ಕೇಳಿಸಿಕೊಂಡಿದ್ದರು ಅದೇ ಗಾಡಿಯಲ್ಲಿದ್ದ ಕಳ್ಳರ ತಂಡ. ಗಾಡಿಯಲ್ಲಿ ಹೆಂಗಸರು, ಮಕ್ಕಳು, ಮುದುಕರು, ಇವರೇ ಇದ್ದವರು. ಕಳ್ಳರು ಪ್ರಯಾಣಿಕರನ್ನು ಬೆದರಿಸಿ, ಅಳಿಯಂದಿರು ಇಬ್ಬರನ್ನೂ ಸಾಯ ಸದೆಬಡಿದು, ಬುಟ್ಟಿಗಳನ್ನು ತೆಗೆದುಕೊಂಡು, ಸರಪಣಿ ಎಳೆದು, ಗಾಡಿ ನಿಂತಾಗ ಇಳಿದು, ಕಂಬಿ ಕಿತ್ತರು. ಅಳಿಯಂದಿರು ದೇವರ ದಯದಿಂದ ಗಾಯಗೊಂಡರು ಅಷ್ಟೆ ಸಾಯಲಿಲ್ಲ. ಕಳ್ಳರಿಗೆ ಸಿಕ್ಕಿದ್ದು ಏನು ? ಚಕ್ಕುಲಿ, ಉಂಡೆ, ಬಾಳೆಹಣ್ಣು, ಎಲೆ ಅಡಿಕೆ, ಇಷ್ಟೆ. ಜೊತೆಗೆ ಎರಡು ಪೊಟ್ಟಣಗಳು. ಒಂದರಲ್ಲಿ ಇನ್ನೂರ ಐವತ್ತು ಹಪ್ಪಳ, ಇನ್ನೊಂದರಲ್ಲಿ ಇನ್ನೂರು ಹಪ್ಪಳ. ನೋಡಿದಿರಾ ? ಕಳ್ಳರೇನೋ ಬೇಸ್ತು ಬಿದ್ದರು. ಆದ್ರೆ. ಅಳೀಮಯ್ಯಂದರು ಸುಧಾರಿಸಿಕೊಳ್ಳಲು ಒಂದು ವಾರ ಬೇಕಾಯ್ತು" ಎಂದು ಕಾರ್ಮಿಕ ಕತೆ ಮುಗಿಸಿದ.

"ಹೌದು. ನೀನು ಹೇಳಿದ್ದು ದಿಟ ಕಣಯ್ಯ. ಒಳಗೆ ನಾಸ್ತಿಯಾದರೂ ಆಸ್ತಿ ಇದೆ ಅಂತ ತಿಳಕೊಳ್ಳಬಹುದು. ನೀನು ಹೇಳಿದ ಹಾಗೆ ಎರಡು ಕಡೆಗೂ ಬೀಗ ಹಾಕ್ತೀನಿ" ಎಂದೆ.

"ಡೋರ ಲಾಕೂ ಹಾಕಿಸಿಬಿಡಿ ಸ್ವಾಮಿ. ಸುಲಭವಲ್ಲೇ ಹಾಕಿ ಕೊಡ್ತೀನಿ" ಎಂದ ಕಾರ್ಮಿಕ.

ಆಗ ನನಗೆ ಅನುಮಾನವಾಯಿತು ಇವನು ಹೇಳಿದ್ದು ನಡೆದ ಸಂಗತಿಯೋ ಕಟ್ಟುಕತೆಯೋ ಅಂತ.

"ಹಾಕ್ಸಿದೀನಲ್ಲ ? ನಿನಗೆ ಕಾಣಿಸಲಿಲ್ಲವೆ ?" ಎಂದೆ.

"ಆ ಕಡೆ ಗಮನ ಕೊಡಲಿಲ್ಲ. ಮೂರು ತಿಂಗಳಿಗೊಮ್ಮೆ ಗ್ರೀಸ್ ಹಾಕಿಸ್ತಾ ಇರಿ ಸ್ವಾಮಿ" ಎಂದು ಕಾರ್ಮಿಕ ಸೈಕಲ್ ಏರಿದ.

"ಚೆನ್ನಾಗಿ ಗ್ರೀಸ್ ಹಾಕ್ತಿ, ಪರವಾಗಿಲ್ಲ. ಎಂದು ನಕ್ಕೆ.

ವಕ್ರ ದೃಷ್ಟಿ

—'ಆಮಲಕ'

"ಅಂತೂ ಮಿತವ್ಯಯದ ಸೂತ್ರಗಳನ್ನು ಪ್ರಕಟಿಸಿದರಂತಲ್ಲ !?'

ಕೆಟ್ಟ ಮೇಲೆ ಬುದ್ಧಿ ಬಂತು. ಬುದ್ಧಿ ಬಂದದ್ದು 'ಜನ'ಕ್ಕೋ, 'ಜನತಾ'ಕ್ಕೋ ಎಂಬುದನ್ನು ಒಂದು ವೇಳೆ ಮಧ್ಯಂತರ ಚುನಾವಣೆ ನಡೆದರೆ ಆಗ ಹೇಳಬಹುದು ಎಂಬುದು ಶುದ್ಧ ಕುಹಕ.

* * *

ದೇಶ ದಿವಾಳಿ ಅಂಚಿನಲ್ಲಿದೆ ಎಂದು T. N. N., K. S. N. ಆದಿಯಾಗಿ ಎಲ್ರೂ ಪದೇ ಪದೇ ಹೇಳ್ತಾನೆ ಇದಾರಲ್ಲ !

"ಅವರ‍್ಯಾಕೆ ಅದನ್ನ ಅಷ್ಟು ಒತ್ತಿ ಒತ್ತಿ ಹೇಳಬೇಕೂ ಅಂತೀನಿ" ಎಂದು ಜನತಾದವರು ಹೇಳುವುದರ ಒಳ ಅರ್ಥ.

"ಕೈ ಹುಣ್ಣಿಗೆ ಕನ್ನಡಿ ತೋರಿಸಲು ಕಾಂಗ್ರೆಸ್ಸೇ ಬೇಕೆ ?" ಎಂದಲ್ಲವಂತೆ.

* * * *

ರಾಜ್ಯಕ್ಕೆ ರಿಕೆಟ್ಸ್ ತಗುಲಿರುವುದಕ್ಕೂ ಈಗ ನಾಲ್ಕೈದು ವರ್ಷಗಳಿಂದ "ಜನತಾ" ಮೈ ಕೈ ತುಂಬಿಕೊಂಡಿರುವುದಕ್ಕೂ ಯಾವ ಸಂಬಂಧವೂ ಇಲ್ಲ, ಕೇವಲ ಕಾಕತಾಳೀಯ ಅಂತೀರಾ ? ಇರಬಹುದು.

* * * *

"ಯಾರ ಪಕ್ಷ ಆದರೇನು ? ನಮಗೆ ವಡೆ, ಪಾಯಸ, ದಕ್ಷಿಣೆ ಬಂದ ರಾಯಿತು. ಮುಂದಿನ 'ಪಕ್ಷ'ದವರೆಗೆ ಧಾಕತ್ತು ಬ್ಯಾಡವೆ ? !" ಎಂದು ಕಳೆದ ಪಕ್ಷಮಾಸದಲ್ಲಿ ಬಸವನಗುಡೀಲಿ ಕೆಲವು ಜನ ಪುರೋಹಿತರು ಮಾತನಾಡಿಕೊಳ್ಳುತ್ತಿದ್ದುದನ್ನೂ ಕೇಳಿದ ಕೆಲವರು ಅಪಾರ್ಥ ಮಾಡಿಕೊಂಡು, ಕಣ್ಣು ಕೆಂಪಗೆ ಮಾಡಿಕೊಂಡರಂತೆ,

"ಕುಂಬಳ ಕಾಯಿ ಕಳ್ಳ ಎಂದರೆ..........." !

*   *   *   *

ಅಂದ ಹಾಗೆ ಮಿತವ್ಯಯದ ಸೂತ್ರಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಅನಗತ್ಯ ಖರ್ಚುಗಳನ್ನು ಇಳಿಸುವ ಭಾರೀ ಜವಾಬ್ದಾರಿಯ ಕೆಲಸದ ಉಸ್ತುವಾರಿ ನೋಡಿಕೊಳ್ಳಲು ಪ್ರತ್ಯೇಕ ಖಾತೆ, ಅದಕ್ಕೊಬ್ಬ ಕ್ಯಾಬಿನೆಟ್ ಮಂತ್ರಿ, ಅವರ ಸಿಬ್ಬಂದಿ ಇಷ್ಟರಲ್ಲೇ ಪ್ರಕಟವಾಗಲಿದೆ ಎಂದು ಹರಡಿರುವ ಸುದ್ದಿ ಶುದ್ಧ ಸುಳ್ಳಂತೆ.

*   *   *   *

"ಕ.ಸಾ.ಪ. ದಲ್ಲಿರೋದು ಕೇವಲ ಕಸ" ಎಂದು ಶ್ಯಾಂ ಸುಂದರ್ ಆಯೋಗ ಹೇಳಿದ ತರುವಾಯ ಚಾಮರ ಸೇವೆಗೆ ಗುಪ್ತರನ್ನು ಸರ್ಕಾರ ನೇಮಿಸಿದ ಬಳಿಕ ಕ. ಸಾ. ಪ. ದಲ್ಲಿನ ಗುಪ್ತ ಗೆದ್ದಲುಗಳಿಗೆ ಚಿಂತೆಯಾಗಿದೆಯಂತೆ.

*   *   *   *

ಪಟ್ಟಭದ್ರ ಹಿತಾಸಕ್ತರಿಂದ ಪರಿಷತ್ತನ್ನು ಪಾರು ಮಾಡಲು ನಡೆದ ನಾಟಕ ನೋಡಿದರೆ ಯಾರು ಪಟ್ಟವನ್ನು ಬಿಡದೇ ಭದ್ರವಾಗಿ ಹಿಡಿಯುವುದರಲ್ಲಿ ಆಸಕ್ತರು ಎಂಬ ಅನುಮಾನ ಬರ್‍ತಾ ಇದೆ ಅಲ್ಲವೆ ?

*   *   *   *

ಎ. ಆರ್. ಕೃ., ಬಿ. ಎಂ. ಶ್ರೀ. ರಾಜರತ್ನಂ ಕಾಲದಲ್ಲಿ ಪರಿಷತ್ತಿನ 'ಕುರ್ಚಿ' ಕೊಟ್ಟರೂ ಕೊಡವಿಕೊಂಡು ಹೋಗ್ತಾ ಇದ್ದವರು ಈಗ್ಯಾಕೆ ಹೀಗೆ ? ಉತ್ತರ ಬೇಕೆ ? ಛೆ ! ನೀವು ಇಷ್ಟು ಇನೋಸೆಂಟು ಅಂತ ತಿಳಿದಿರಲಿಲ್ಲ. ಈಗ ಪರಿಷತ್ತಿನಲ್ಲಿ ಬರ್‍ತಾ ಇರೋದು "ಫಾರಿನ್ ಸೆಂಟು" ವಾಸನೆ. ಆಗ ಬರ್‍ತಾ ಇದ್ದದ್ದು ಜುಜುಬಿ ಶ್ರೀಗಂಧದ ಪರಿಮಳ !

*   *   *   *


ಅದು ಏನೇ ಇರಲಿ. ಕ. ಸಾ. ಪ. ಕಥೆ ಕೇಳಿದವರಿಗೆ ಬೆಣೆ ತೆಗೆಯೋಕೆ ಹೋಗಿ ಬಾಲ ಸಿಕ್ಕಿಸಿಕೊಂಡ ಕಪಿ ಕಥೆ ಜ್ಞಾಪಕಕ್ಕೆ ಬಂತಂತೆ.

*   *   *   *

"ಪಟ್ಟಮುಂ ಹಿಡಿದವರ ಪಾಡು" ಇದು ತಮಿಳು ಸಿನಿಮಾದ ಹೆಸರಲ್ಲ. ಕ. ಸಾ. ಪ. ಕಥೆ in a nutshell, ಅಷ್ಟೆ. ಅಂದ ಹಾಗೆ ಇದೇ ತಲೆಬರಹ (ಹಣೆ ಬರಹ!) ಕುರಿತು ಸಂಶೋಧನೆ ನಡೆಸಲು—ಉದಯೋನ್ಮುಖ ಕ್ರಾಂತಿಕಾರಿ ಬರಹಗಾರರಿಗೆ ಕ. ಸಾ. ಪ. ಬೇಕಾದಷ್ಟು ಗ್ರಾಸ ಒದಗಿಸಿದೆ ಅಲ್ವೆ ?

* * * *

ಈ ಸಂಶೋಧನೆ ಒಂದು ರೀತಿ New wave ಸಂಶೋಧನೆ ಆಗಬಹುದು. ಹೊಸ ಕನ್ನಡ ವಿಶ್ವವಿದ್ಯಾನಿಲಯ ಡಾಕ್ಟರೇಟ್ ಕೊಟ್ಟು ಮೇಲ್ಪಂಕ್ತಿ ಹಾಕಿದರೂ ಹಾಕಬಹುದು.



ಮುನ್ನೆಚ್ಚರಿಕೆ

—ಬಿ. ಎಸ್. ಚಂದ್ರಶೇಖರ್

ಕಚೇರಿ ಕೆಲಸಕ್ಕಾಗಿ ದೂರದ ಊರಿಗೆ ಪ್ರಯಾಣ ಮಾಡುವ ಸಂದರ್ಭ ಈಚೆಗೆ ಬಂದಿತ್ತು. ಆಟೋರಿಕ್ಷಾ ಸಿಗುವುದು ತಡವಾಗಿ ರೈಲು ಬರುವ ವೇಳೆಗೆ ಕೇವಲ ಹತ್ತು ನಿಮಿಷ ಇರುವಾಗ ಸ್ಟೇಷನ್ ತಲುಪಿದ್ದೆ. ಅವಸರ ಅವಸರದಲ್ಲಿ ಏದುಸಿರು ಬಿಡುತ್ತಾ ಪ್ಲಾಟ್‌ಫಾರಂ ತಲುಪಿದಾಗ ಈ ರೈಲು ಈ ದಿನ ಎರಡು ಗಂಟೆ ತಡ ಎಂದು ಹೆಣ್ಣು ಕಂಠ ಮೂರು ಭಾಷೆಯಲ್ಲಿ ಉಲಿಯುತ್ತಿತ್ತು.

ಇಂತಹ ಹೇಳಿಕೆ ಕೇಳಿದಾಗ 'ಅಯ್ಯೋ' ಎಂದು ಸಂತಾಪ ಪಡಬೇಕೆ, 'ಸದ್ಯ' ಎಂದು ಸಮಾಧಾನ ಪಡಬೇಕೆ ಎನ್ನುವಲ್ಲಿ ನನಗೆ ಸ್ವಲ್ಪ ಗೊಂದಲವೇ ಆಗುತ್ತದೆ. ಎರಡು ಗಂಟೆ ಅಂದರೆ 120 ನಿಮಿಷ—ಇಲ್ಲಿ ಕಾಯುತ್ತಾ ಕುಳಿತಿರಬೇಕು ನಿಜ. ಆದರೆ ರೈಲು ನಾಲ್ಕು ಗಂಟೆ ತಡವಾಗಿಲ್ಲ. ಎಂಟು ಗಂಟೆ ತಡವಾಗಿಲ್ಲ. ನಾನು ಹಿಂದೊಮ್ಮೆ ಹೋಗಿದ್ದ ರೈಲು 24 ಗಂಟೆ ತಡವಾಗಿ ತಲಪಿತ್ತು. ಅದರ ಮುಂದೆ ಈ ಜುಜುಬಿ ಎರಡು ಗಂಟೆ ಏನು ಲೆಕ್ಕ ?

ಈ ಗೊಂದಲದಲ್ಲಿಯೆ ಈಗ ಬಂದಿರುವ ಹೊಸ ಟೈಂ ಟೇಬಲ್ ಕೊಂಡು ಕೊಂಡು ವೆಯ್ಟಿಂಗ್ ರೂಂಗೆ ಹೋಗುತ್ತಿರುವಾಗ ನನ್ನ ಗೆಳೆಯ ಮೂರ್ತಿ ಕಂಡ. ನಾನು ಹೋಗುತ್ತಿರುವ ಊರಿನಲ್ಲಿರುವ ಅವನ ಹೆಂಡತಿಯ ಸೋದರತ್ತೆಯ ಅಳಿಯನ ತಮ್ಮನಿಗೆ ತಲುಪಿಸಲು ಆರು ಕೆ. ಜಿ. ಕುರುಕಲು ತಿಂಡಿ ಹೊತ್ತಿದ್ದ ಆರು ಅಡಿ ಎತ್ತರದ ಬುಟ್ಟಿಯೊಂದಿಗೆ.

ಮೂರ್ತಿಯೊಂದಿಗ ವೆಯ್ಟಿಂಗ್ ರೂಮಿಗೆ ಹೋಗಿ ಕುಳಿತು ಟೈಂ ಟೇಬಲ್ ತಿರುವಿ ಹಾಕುತ್ತಾ ಈ ರೈಲುಗಳು ಹೀಗೆ ಯದ್ವಾ ತದ್ವಾ ಲೇಟಾಗಿ ಬರುವುದಾದರೆ ಈ ಟೈಂ ಟೇಬಲ್ ಏಕೆ ದಂಡ ? ಅದೂ 50 ಪೈಸೆ ಇದ್ದ ಪುಸ್ತಕಕ್ಕೆ ಈಗ ಐದು ರೂಪಾಯಿ' ಎಂದು ಗೊಣಗುಟ್ಟುತ್ತಿದ್ದೆ.

ಆ ನಿರೀಕ್ಷಣಾ ಕೊಠಡಿಯ ಮಜಬೂತಾದ ಮೇಜು, ಕಾಲು ಚಾಚಿಕೊಂಡು ಇಷ್ಟುದ್ದ ಮಲಗಿಕೊಳ್ಳಬಹುದಾದ ಆರಾಮ ಕುರ್ಚಿ, ಆ ಕುರ್ಚಿಯ ಆರು ಅಡಿ

ಉದ್ದವ ಕೈ ಇವುಗಳನ್ನೆಲ್ಲಾ ಮೆಚ್ಚುಗೆಯಿಂದ ಪರೀಕ್ಷಿಸುತ್ತಿದ್ದ ಮೂರ್ತಿ, 'ನಿನ್ನ ಟೈಂ ಟೇಬಲ್ ಬಿಡಯ್ಯ. ಯಾವ ಮಹಾ. ಈ ವೆಯ್ಟಿಂಗ್ ರೂಂನೋಡು. ಎಷ್ಟು ಖರ್ಚು ಮಾಡಿ ಕಟ್ಟಿದ್ದಾರೆ. ಎಲ್ಲಾ ರೈಲುಗಳೂ ಸರಿಯಾದ ಟೈಂಗೆ ಬಂದರೆ ಇದರ ಉಪಯೋಗ ಏನು ? ಎಂದು ಹೇಳಿ 'ಜೋರಾಗಿ ಕೇಕೆ ಹಾಕಿ ಕೊಂಡು ನಗಲಾರಂಭಿಸಿದ.

ಇದು ನಿಮಗೆ ಹಳೆ ಜೋಕ್ ಎನ್ನಿಸಬಹುದು. ಆದರೆ ನನಗೆ ಗೊತ್ತಿರುವಂತೆ ಮೂರ್ತಿ 'ಸಟೀಕವ್ರತರತ್ನಮಾಲ' ಬಿಟ್ಟು ಇಲ್ಲಿಯವರೆಗೂ ಇನ್ನೊಂದು ಪುಸ್ತಕ, ಮ್ಯಾಗಜೈನ್ ಕೊಂಡಿಲ್ಲ, ಓದಿಲ್ಲ. ಆ ಸಮಯದಲ್ಲಿ ಅವನಿಗೆ ಹೊಳೆದ ಒರಿಜಿನಲ್ ಐಡಿಯಾ ಇದು ಎಂದು ಇಲ್ಲಿ ಕಂಸದಲ್ಲಿ ಹೇಳಿಬಿಡುತ್ತೇನೆ.

ಟೈಂ ಟೇಬಲ್‌ನಲ್ಲಿ 24 ಗಂಟೆ ತಣ್ಣೀರು, ಬಿಸಿ ನೀರು ಸುರಿಸುವ ನಲ್ಲಿಗಳು, ನಾಲ್ಕು ದಿಕ್ಕಿನಿಂದ ಗಾಳಿ ಬೀಸುವ ಕಿಟಕಿಗಳು, ನಾಲ್ಕು ಚಾನಲ್‌ನಲ್ಲಿ ಸಂಗೀತ ಕೊಡುವ ಸಿಸ್ಟಮ್ ಇರುವ ರೂಮುಗಳ ಹೋಟೆಲುಗಳು, ಪಾಪವನ್ನೆಲ್ಲಾ ಧಿಡೀರ್ ಪರಿಹರಿಸುವ ಅರಚ್ ಮೀಗು ಮಹಾತ್ಮೆ ಹೊಂದಿರುವ ದೇವಸ್ಥಾನಗಳು, ಈ ದೇವಸ್ಥಾನಗಳಿಗಿಂತ ನಾವೇ ಸುಲಭವಾಗಿ ಕೇವಲ ಪ್ರಾರ್ಥನೆಯಿಂದ ಮೋಕ್ಷ ಕೊಡಿಸುತ್ತೇವೆ ಎಂದು ಹೇಳುವ ಇತರ ಮತಗಳ ಜಾಹಿರಾತುಗಳು ಇವುಗಳನ್ನೆಲ್ಲಾ ನೋಡಿಕೊಂಡು ಪುಟ ತಿರುಗಿಸುತ್ತಿದ್ದಾಗ ಹಟಾತ್ತನೆ ಕಂಡ ನೋಟೀಸ್ ನವೆಂಬರ್ ಚಳಿಯ ತಿಂಗಳಲ್ಲೂ ಬೆವರುವಂತೆ ಮಾಡಿತು.

ಆ ಪುಟದ ಶೀರ್ಷಿಕೆ ಕಳ್ಳತನ, ದರೋಡೆ ನಿಮ್ಮ ಸಾಮಾನು ಕಳ್ಳತನವಾದರೆ ದರೋಡೆಕೋರರು ನಿಮ್ಮ ಮೇಲೆ ದಾಳಿ ಮಾಡಿದರೆ ಈ ನಮೂನೆಯ ಮೂರು ಪ್ರತಿ ಭರ್ತಿ ಮಾಡಿಕೊಡಿ ಎಂದು ರೈಲ್ವೆ ಇಲಾಖೆ ಸೂಚನೆ ಕೊಟ್ಟಿತ್ತು.

ನನಗೆ ದರೋಡೆಕೋರರ ವಿಚಾರದಲ್ಲಿ ಒಂದು ರೀತಿಯ ಅಲರ್ಜಿ. ಬರಿ ಅಲರ್ಜಿ ಏನು ಬೇಕಾದರೆ ಫೋಬಿಯಾ ಎಂದೇ ಹೇಳಬಹುದೇನೋ. ಸರಿ ಹೊತ್ತಿನಲ್ಲಿ ಬರಿ ಚೆಡ್ಡಿ ಹಾಕಿಕೊಂಡು ಬಂದ ಆ ದರೋಡೆಕೋರರು ನನ್ನ ತಲೆ ಕಡೆಗೆ ದಪ್ಪ ದೊಣ್ಣೆ ತೋರಿಸುತ್ತಾ 'ಬಂಗಾರು ಬಂಗಾರು' ಎಂದು ಕಿರಿಚಿಕೊಳ್ಳುವ ಆ ದೃಶ್ಯ ಊಹಿಸಿಕೊಂಡರೆ ನನಗೆ ನಡುಕ ಬರುತ್ತದೆ. ಅದರಲ್ಲೂ ಕೊಡಲು ಬಂಗಾರ ಅಥವ ಹಣ ಈ ಮನೆಯಲ್ಲೇನೂ ಇಲ್ಲ ಎಂದು ದರೋಡೆಕೋರರಿಗೆ ಗೊತ್ತಾದ ಮೇಲೆ ಅವರಿಗೆ ಬರಬಹುದಾದ ಕೋಪ ಊಹಿಸಿಕೊಳ್ಳೋಕ್ಕೂ ನನಗೆ ಆಗುವು

ದಿಲ್ಲ. ಪೇಪರ್‌ನಲ್ಲಿ ಮೊದಲ ದರೋಡೆ ಸುದ್ದಿ ಓದಿದ ದಿನವೇ ದೂರದ ಬಡಾವಣೆಯಲ್ಲಿದ್ದ ವಿಶಾಲ ಗಾಳಿ ಬೆಳಕು ಬರುತ್ತಿದ್ದ ಕಡಿಮೆ ಬಾಡಿಗೆ ಮನೆಯಿಂದ ಊರ ನಡುವಿನ ಹೆಚ್ಚು ಬಾಡಿಗೆಯ ಚಿಕ್ಕ ಮನೆಗೆ ಬದಲಾಯಿಸಿದ್ದೇನೆ. ಈಗ ಈ ಟೈಂ ಟೇಬಲ್ ನೋಡಿದರೆ ರೈಲು ಪ್ರಯಾಣದಲ್ಲಿ ಸಾಮಾನು ಕಳ್ಳತನ, ಆಯುಧ ದೊಂದಿಗಿನ ದರೋಡೆ ಮಾಮೂಲು ಎನ್ನುವ ರೀತಿ ಇದೆ.

ನೀವು ಈ ಟೈಂ ಟೇಬಲ್ ನೋಡಿಲ್ಲದೆ ಇದ್ದರೂ ಇರಬಹುದು. ಅದಕ್ಕೆ ಸ್ವಲ್ಪ ವಿವರ ಕೊಡಬೇಕು ಅಂತ ಕಾಣುತ್ತೆ. ಈ ಟೈಂ ಟೇಬಲ್‌ನಲ್ಲಿ ಯಾವ ರೈಲು ಯಾವ ಊರಿಗೆ ಎಷ್ಟು ಗಂಟೆಗೆ ಬರಬೇಕು ಎನ್ನುವ ಮಾಹಿತಿಯಲ್ಲದೆ ಮಲಗಿಕೊಂಡು ಹೋಗಲು ಎಷ್ಟು ಹೆಚ್ಚಿಗೆ ಹಣ ಕೊಡಬೇಕು, 125 ಗ್ರಾಂ ಮೊಸರನ್ನಕ್ಕೆ, ಈರುಳ್ಳಿ ಪಚಡಿಯೊಂದಿಗ ಮಟನ್ ಬಿರಿಯಾನಿಗೆ ಎಷ್ಟೆಷ್ಟು ದುಡ್ಡು ಎಂದು ಮೊದಲಾದ ವಿವರಗಳಿರುತ್ತವೆ. ಈ ವರ್ಷದ ಟೈಂ ಟೇಬಲ್ ನಲ್ಲಿ ಹೊಸದಾಗಿ ದಾರಿಯಲ್ಲಿ ಸಾಮಾನು ಕಳುವಾದರೆ ಅಥವ ಆರ್ಮ್‌ಡ್ ರಾಬರಿ ಅಥವ ಡಕಾಯಿತಿ ಆದರೆ ನೀವು ಭರ್ತಿ ಮಾಡಬೇಕಾದ ಫಾರಂ ಬೇರೆ ಕೊಟ್ಟಿದ್ದಾರೆ.

ಅಂದರೆ ದೂರದ ಪ್ರಯಾಣ ಮಾಡುವಾಗ ಮಲಗಿಕೊಂಡು ಹೋಗುವುದು, ಮೊಸರನ್ನ ತಿನ್ನುವುದು ಸಾಮಾನ್ಯವಾದಂತೆ ನಿಮ್ಮ ಸಾಮಾನು ಕಳೆದುಕೊಳ್ಳುವುದು, ಆಯುಧ ಹೊತ್ತ ದರೋಡೆಕೋರರು ನಿಮ್ಮನ್ನು ತದಕುವುದು ಅಷ್ಟೇ ಸಾಮಾನ್ಯ ಎಂದು ಇಲಾಖೆಯವರೇ ಒಪ್ಪಿಕೊಂಡಿದ್ದಾರೆ.

ಅದೂ ಈ ರೈಲು ನಡು ರಾತ್ರಿಯಲ್ಲಿ ಚಂಬಲ್ ಕಣಿವೆಯಲ್ಲಿ ಹೋಗುತ್ತ ದಂತೆ. ಸರ್ಕಾರ ಹೇಗೂ ದುಡ್ಡು ಕೊಡುತ್ತದೆ ಎಂದು ನಾನು ಮೊದಲ ದರ್ಜೆ ಯಲ್ಲಿ ಹೋಗುತ್ತಿದ್ದೇನೆ. ನನ್ನ ಕಂಪಾರ್ಟ್‌ಮೆಂಟಿನಲ್ಲಿ ನಾನೊಬ್ಬನೇ ಇದ್ದರೂ ಇರಬಹುದು. ಆಗ ಹಿಂದಿ ಸಿನಿಮಾ ಮೂಲಕ ನನಗೆ ಪರಿಚಯವಿರುವ ಕೆಂಡದ ಕಣ್ಣುಗಳು, ಪೊದೆ ಮೀಸೆ, ಕಟ್ಟಿಕೊಂಡಿರುವ ಕರಿ ದಾರದ ತಾಯತದಿಂದ ಹೊರ ಬರಲು ಉಬ್ಬಿ ನಿಂತಿರುವ ಬೈಸೆಪ್ಸ್‌ಗಳನ್ನು ಹೊಂದಿರುವ ದರೋಡೆಕೋರ ಬಂದು ಹಣ, ಬಂಗಾರ ಕೊಡು, ಇಲ್ಲ ಚೂರಿ ಹಾಕುತ್ತೇನೆ ಎನ್ನುವುದು, ನಾನು ನನ್ನ ಹತ್ತಿರ ಇರುವುದು ಆಫೀಸ್ ಫೈಲ್‌ಗಳು ಹಾಗೂ ಮೂರ್ತಿಯ ನೆಂಟರಿಗೆ ತಲುಪಿಸಬೇಕಾದ ಚಕ್ಕುಲಿ ಕೋಡುಬಳೆ ಬುಟ್ಟಿ ಎನ್ನುವುದು, ಆ ದರೋಡೆಕೋರ ನಿಗೆ ಆಗ ಬರುವ ಕೋಪ ಇವುಗಳನ್ನೆಲ್ಲ ಯೋಚಿಸುತ್ತಿರುವಂತೆಯೆ ಈ ಟೂರ್ ಕ್ಯಾನ್ಸಲ್ ಮಾಡಿ ಆಫೀಸಿಗೆ ಒಂದು ವಾರ ರಜ ಹಾಕಿ ಬಿಡಲೆ ಎನ್ನಿಸುತ್ತಿತ್ತು.

ಆದರೆ ರೈಲು ಹೇಗೂ ಎರಡು ಗಂಟೆ ತಡವಾಗಿದ್ದದ್ದು ಒಳ್ಳೆಯದೇ ಆಯಿತು. ಅರ್ಧ, ಮುಕ್ಕಾಲು ಗಂಟೆಯಲ್ಲಿ ಈ ಹೆದರಿಕೆ ಸ್ವಲ್ಪ ಕಡಿಮೆಯಾಗಿ ಮನಸ್ಥಿತಿ ಸಾಮಾನ್ಯಕ್ಕೆ ಬರಲು ಅನುಕೂಲವಾಯಿತು.

ನನಗೆ ಅಷ್ಟು ಗಾಬರಿ ಹಿಡಿಸಿದ ಆ ಘಟವನ್ನು ಮೂರ್ತಿ ನೋಡಿ 'ಅಲ್ಲಯ್ಯ ಈ ಇಲಾಖೆಯವರು ಬಹಳ ಜಾಣರಿದ್ದಾರಯ್ಯ. ಒಳ್ಳೆಯದನ್ನು ನಿರೀಕ್ಷಿಸು ಕೆಟ್ಟದಕ್ಕೆ ಸಿದ್ಧವಾಗಿರು ಎಂದು ಹೇಳೋ ತರ ಯಾವಾಗಲೂ ಮುಂಚೇನೇ ಎಚ್ಚರಿಕೆ ತೊಗೋಳೋದು ಒಳ್ಳೇದು. ಬೇರೆ ಡಿಪಾರ್ಟ್‌ಮೆಂಟ್‌ನೋರು ಇದರಿಂದ ಪಾಠ ಕಲೀಬಹುದು. ಈಗ ನೋಡು. ಬಿ. ಟಿ. ಎಸ್. ಟಿಕೆಟ್ ಹಿಂದೆ ನೀವು ಇಳಿಯುವುದಕ್ಕೆ ಮುಂಚೆಯೇ ಬಸ್ ಚಲಿಸಿ ನೀವು ಕೆಳಗೆ ಬಿದ್ದು ಹಣೆಯಲ್ಲಿ ರಕ್ತ ಸುರಿಯುತ್ತಿದ್ದಾಗ ಪಡೆಬಹುದಾದ ಮುಲಾಮು ವಿವರ ಕೊಡಬಹುದು' ಎಂದ.

ದರೋಡೆಕೋರರನ್ನು ಮರೆಯಲು ಮೂರ್ತಿಯೊಂದಿಗೆ ಮಾತನಾಡುತ್ತಿರುವುದು ಒಳ್ಳೆಯ ಉಪಾಯ ಎಂದುಕೊಂಡು 'ಹೌದು ನೋಡು. ಈಗ ಹೋಟೆಲಿನಲ್ಲಿ ಬಿಲ್ ಕೊಡುತ್ತಾರಲ್ಲ. ಹಿಂದೆಲ್ಲಾ ಖಾಲಿ ಜಾಗ ಇರುತ್ತೆ. ಅಲ್ಲಿ ಕಲ್ಲಿನಂತಹ ಇಡ್ಲಿ ಅರಗಿಸುವ ಅಜೀರ್ಣ ಔಷಧಿ ಅಥವ ಫುಡ್ ಪಾಯ್ಸನಿಂಗ್ ಆದಾಗ ತೆಗೆದುಕೊಳ್ಳಬಹುದಾದ ಕ್ರಮ ತಿಳಿಸಬಹುದು' ಎಂದೆ.

ಮೂರ್ತಿ 'ಹಾಗೆ ಟೆಲಿಫೋನ್ ಬಿಲ್ ಹಿಂದೆ ಇಷ್ಟು ಭಾರಿ ಮೊತ್ತದ ಬಿಲ್ ನೋಡಿ ರಕ್ತದ ಒತ್ತಡ ತೀರಾ ಮೇಲಕ್ಕೆ ಹೋಗಿದ್ದರೆ ನುಂಗಬಹುದಾದ ಮಾತ್ರೆ ವಿಷಯ ಕೊಡಬಹುದು'

ನಾನು 'ಡೈರಿ ಹಾಲಿನವರು ಹಾಲಿನ ಕೆಟ್ಟವಾಸನೆ ತೆಗೆಯುವಂತಹ ಯಾವುದಾದರೂ ಕೆಮಿಕಲ್ ಇದ್ದರೆ ಅದರ ವಿಚಾರ ಆ ಪ್ಯಾಕೆಟ್ ಮೇಲೆ ಪ್ರಿಂಟ್ ಮಾಡಬಹುದು.

ಹೀಗೆಯೇ ನಮ್ಮ ಮಾತುಕತೆ ಮುಂದುವರೆಯುತ್ತಿದ್ದಾಗ ಇನ್ನು ಕೆಲವೇ ನಿಮಿಷಗಳಲ್ಲಿ ರೈಲು ಇಷ್ಟನೆಯ ನಂಬರ್ ಪ್ಲಾಟ್‌ಫಾರಂಗೆ ಬಂದು ಸೇರುತ್ತದೆ ಎನ್ನುವ ಘೋಷಣೆ ತೇಲಿ ಬಂತು.

ಸನ್ಮಾನ

—ಲೀಲಾ ಮಿರ್ಲೆ

ಭಾನುವಾರ ಪತ್ರಿಕೇಲಿ ವಾರ ಭವಿಷ್ಯದ ಕಡೆ ಕಣ್ಣುಹಾಯಿಸುವುದು (ಲಕ್ಷಣವಾಗಿ ಓದುವುದು) ಒಂಥರ ಅಭ್ಯಾಸವಾಗಿಬಿಟ್ಟಿದೆ. ಬರೆದಿರುವುದರಲ್ಲಿ ಒಳ್ಳೆಯುದನ್ನು ನಂಬಿ, ಅವಲಕ್ಷಣವಾದುದನ್ನು 'ಏನೋ ಬರೀತಾರೆ' ಎಂದುಕೊಂಡು ಪತ್ರಿಕೇನ ಪಕ್ಕಕ್ಕಿಡುವುದು ವರ್ಷಾನುಕಾಲದಿಂದ ಬಂದ ರೂಢಿ. ಒಂದು ಭಾನುವಾರ ನಮ್ಮ ರಾಶಿಯುವರ ಭವಿಷ್ಯ ಹೀಗಿತ್ತು "ಅಕ್ಕನಿಗೆ ಹೊಟ್ಟೆ ನೋವು. ಬೆಲೆ ಏರಿಕೆಯಿಂದ ಸಾಲ. ಹೆಂಡತಿಗೆ ದೇಹಾಲಸ್ಯ. ಸಮಾಜದಲ್ಲಿ ಸನ್ಮಾನ" ಪಂಚ್ ಲೈನ್ ಓದಿ ಒಳಗೊಳಗೇ ಸಂತೋಷವಾಯಿತು. ಸನ್ಮಾನ ದೊರಕುವಂತಹ ಯಾವ ಕಾರ್ಯಗಳನ್ನೂ ಮಾಡಿಲ್ಲದಿದ್ದರೂ ಯಾರಿಗೆ ಗೊತ್ತು, ಅದೃಷ್ಟ ಖುಲಾಯಿಸಿದರೆ ಎಲ್ಲಾ ಸಾಧ್ಯ ಎಂದುಕೊಂಡೆ.

ಮಾರನೆಯ ದಿನ ಇವರ ಆಫೀಸಿನಲ್ಲಿ ಒಂದು ಪಾರ್ಟಿ ಇತ್ತು. ಸರಿ, ಇವರ ಜೊತೆ ನಾನೂ ಹೋಗಬೇಕಾಗಿ ಬಂತು. ಈ ಆಫೀಸು ಪಾರ್ಟಿಗಳೆಂದರೆ ಅದೊಂದು ತರಹ ಪ್ರಾರಬ್ಧ ಕರ್ಮ. ಸಂಜೆ ಎಲ್ಲಾ ಸುಮ್ಮನೆ ಹಲ್ಲು ಕಿರಿಯುತ್ತಿರಬೇಕು. ಶುದ್ಧ ಕೃತಕ ವಾತಾವರಣ. ಸಂಜೆ ಅಲ್ಲಿಗೆ ಹೋದೆವು. ಹಾಗೂ ಹೀಗೂ ಅದೂ ಇದೂ ಮಾತನಾಡುತ್ತಾ ಕಾಲ ಕಳೆಯುತ್ತಿರುವಾಗ, ಒಬ್ಬಾಕೆ "ಏನನ್ಯಾಯ ಅಂತ. ನಾನು ಅಮೆರಿಕಾದಿಂದ ತಂದ ಕನ್ನಡಕದ ಫ್ರೇಮ್ ಮುರಿದು ಹೋಯಿತು. ಹ್ಯಾಗೆ ಅಂತ ತಿಳೀದು. ಅರವತ್ತು ಡಾಲರ್ ಕೊಟ್ಟಿದ್ದೆ" ಅಂತ ಹಲುಬಿದಳು. ತಕ್ಷಣ ಆಗಾಗ್ಗೆ ನಮ್ಮ ಮನೆಗೆ ಬರುತ್ತಿದ್ದ ಮೆಕ್ಯಾನಿಕ್ ಕೃಷ್ಣ ಹೇಳುತ್ತಿದ್ದುದು ಜ್ಞಾಪಕಕ್ಕೆ ಬಂತು. 'ಅಮ್ಮಾ ಮನೆಗೆ ಒಂದು ಓಲ್‌ಟೈಟ್ ಟ್ಯೂಬ್ ತನ್ನಿ. ಯಾವ ಸಾಮಾನು ಬೇಕಾದ್ರೂ ಅಂಟಿಸಬಹುದು' ಅಂತ.

ಆಕೆಗೆ ಸಹಾಯ ಮಾಡುವ ಉದ್ದೇಶದಿಂದ, "ನೀವು ಓಲ್‌ಟೈಟ್ ಟ್ರೈ ಮಾಡಿದಿರಾ" ? ಎಂದೆ. ಎಲ್ಲರೂ ಒಬ್ಬರ ಮುಖ ಒಬ್ಬರು ನೋಡಿದರು. ಹತ್ತಿರದಲ್ಲೇ ನಿಂತಿದ್ದ ನಮ್ಮವರ ಮುಖವೂ ಕೆಂಪಾಯಿತು. ಮಿಸೆಸ್ ಮಿಹರಾ ನನ್ನನ್ನು ಕರುಣಾಪೂರಿತ ದೃಷ್ಟಿಯಿಂದ ನೋಡುತ್ತಾ, "ಯು ಮೀನ್ ಹೋಲ್ಡಾಟೈಟ್ ?" ಎಂದರು. ಕೃಷ್ಣನ ಓಲ್‌ಟೈಟಿನ ನಿಜ ಸ್ವರೂಪವನ್ನು ನಾನು

ಯೋಚಿಸಿಯೇ ಇರಲಿಲ್ಲ ! ಆ ಸಂಜೆ ಎಲ್ಲಾ ಬಲುಮುಜುಗರವಾಯಿತು. ಭೂಮಿ ಬಾಯಿ ಬಿಡಬಾರದೆ ಎನ್ನಿಸಿತು.

ಅದೇ ಶುಕ್ರವಾರ ಚಂದ್ರಶೇಖರನ ಮದುವೆಯ ಕರೆಯೋಲೆ ಬಂತು. ಅವನು ನಮಗೆ ತುಂಬ ಬೇಕಾದವನು. ಅಂದಮೇಲೆ ಮದುವೆಗೆ ಹೋಗಲೇಬೇಕು. ಈ ಮದುವೆ ಮನೆಗಳಿಗೆ ಹೋಗುವುದೆಂದರೆ ಅದೊಂದು ಪ್ರಾಜೆಕ್ಟ್ ತರಹ. ಪಟ್ಟೆವಾಳಿ ಉಟ್ಟು, ಸಿಂಗರಿಸಿಕೊಂಡು ಹೋಗುವುದು ನನ್ನ ಪಾಲಿಗೆ ಒಂದು ದೊಡ್ಡ ಕಸರತ್ತು ಮಾಡಿದ ಲೆಕ್ಕ. ಜೊತೆಗೆ ಇಲ್ಲಿ ಯಾವ ಅವಮಾನ ಕಾದಿದೆಯೊ ಎನ್ನಿಸಿತು. ಆದರೆ ಮದುವೆ ಮನೆಯಲ್ಲಿ ಶೇಖರನನ್ನು ಬಿಟ್ಟು ನಮಗೆ ಇನ್ಯಾರ ಪರಿಚಯವೂ ಇರಲಿಲ್ಲವಾದ್ದರಿಂದ, ಇಲ್ಲಂತೂ ಬಾಯೇ ಬಿಡಬಾರದು, ತೆಪ್ಪಗೆ ಹೋಗಿ ಬರಬೇಕು ಎಂದು ಧೈರ್ಯ ತಂದುಕೊಂಡೆ.

ಸರಿ, ಮದುವೆ ಮನೆಗೆ ಹೊರಟೆವು. ವಧುವರರನ್ನು ನೋಡಿ ಆಶೀರ್ವದಿಸಿದ್ದಾಯಿತು. ಚಂದ್ರಶೇಖರನ ಬಲವಂತಕ್ಕೆ ಊಟ ಮಾಡಿದ್ದೂ ಆಯಿತು.

ಬಾಗಿಲಲ್ಲಿ ತೆಂಗಿನಕಾಯಿ ಕೊಡುತ್ತಿದ್ದರು. ಮನೆಯಲ್ಲಿ ಆಗಲೇ 8–10 ಕಾಯಿಗಳಿದ್ದು, ಅವುಗಳನ್ನು ವಿಲೇವಾರಿ ಮಾಡುವುದೇ ಒಂದು ಕೆಲಸವಾಗಿತ್ತು. ಅದಕ್ಕೆ ಇವರಿಗೆ ಹೇಳಿದೆ 'ಸುಮ್ಮನೆ ನೆಟ್ಟಗೆ ಹೊರಟು ಹೋಗೋಣ. ಕಾಯಿ ತೆಗೆದುಕೊಳ್ಳೋದು ಬೇಡ. ನಮಗೆ ಹ್ಯಾಗೂ ಯಾರೂ ಗುರುತಿಲ್ಲ ಅಂತ. ಸರಿ ಎಂದು ಇಬ್ಬರೂ ಬಾಗಿಲಿನಿಂದ ಬೇಗ ಹೊರಗೆ ಹೋದೆವು. ಹತ್ತಿರದಿಂದ ಸಣ್ಣ ಧ್ವನಿಯೊಂದು ಕೇಳಿಸಿತು "ನೋಡು. ತಾಂಬೂಲಾನೂ ತೆಗೆದುಕೊಳ್ಳದೆ ಹೋಗ್ತಿದಾರೆ. ಗೇಟ್ ಕ್ರ್ಯಾಶ್ ಕೇಸೇ ಇರಬೇಕು. ಬಟ್ಟೆ ಚೆನ್ನಾಗಿ ಹಾಕಿಕೊಂಡ ಮಾತ್ರಕ್ಕೆ ನಂಬಕ್ಕಾಗಲ್ಲ. ಊಟ ಗಿಟ್ಟಿಸಲು ಬಂದವರು. ತಾಂಬೂಲ ತೆಗೆದು ಕೊಳ್ಳುವಾಗ ತಿಳಿದರೆ ಕಷ್ಟ ಅಂತ ಹೀಗೆ ನುಸುಳಿ ಹೋಗುತ್ತಾರೆ. ಹುಷಾರಾಗಿರಬೇಕು.

ವಾರ ಕಳೆಯುವ ತನಕ ಹೊರಗೆ ಹೋಗಬಾರದು ಎಂದು ವಿವೇಕ ಹೇಳಿತು. ಸಮಾಜದಲ್ಲಿ ವಿಪರೀತ ಸನ್ ಮಾನ ಕಾದಿರುವ ಹಾಗಿತ್ತು.

ಹ್ಯಾಟ್ರಿಕ್ ಹೊಡೆಯುವ ಆಸೆ ಖಂಡಿತ ನನಗಿರಲಿಲ್ಲ !

17

'ಕೊರವಂಜಿ'ಯಿಂದ



ಶ್ರೀರಂಗಪಟ್ಣ

—ನಾ. ಕಸ್ತೂರಿ

"ಬೆಳಗ್ಗೆ, ಅಷ್ಟು ಹೊತ್ತಿಗೇನೇ ಹೊರಟುಬಿಡೋಣ" ಅಂದಳು, ಹಿಂದಿನ ರಾತ್ರಿ. ಮೂರು ತಿಂಗಳಿಂದಲೂ ನಾವು ಮಲಕು ಹಾಕುತ್ತಿದ್ದ ಪ್ಲಾನು, ಶ್ರೀರಂಗಪಟ್ಟಣಕ್ಕೆ ಹೋಗಿ, ತಮಾಷೆಯಾಗಿ ಒಂದು ದಿನ ಕಳೆದು, ಹಾಳು ಸಂಸಾರ ತಾಪತ್ರಯ ಒಂದು ದಿನದ ಮಟ್ಟಿಗೆ ಮರೆತು, ದರಿಯಾದವಲತ್ತು, ಕಾವೇರೀ ತೀರ ಎಲ್ಲ ನೋಡಿಕೊಂಡು ಹಾಯಾಗಿ ಮನೆಗೆ ಬರೋಣ, ಅನ್ನೋದು. "ಒಂದಿಷ್ಟು ಕಾಫಿ ಬಸಿದುಕೊಂಡು ಉಪ್ಪಿಟ್ಟು ತಿಂದು ಹೊರಟೇಬಿಡೋಣ" ಎಂದು ನಾನೂ ಹೇಳಿದೆ. "ತಂಪು ಹೊತ್ತಿನಲ್ಲೇ ಹೋದರೆ ಒಳ್ಳೆಯದು, ಮಕ್ಕಳಿಗೂ ಮೈಗೆ ಶಾಖ ತಟ್ಟುವುದಿಲ್ಲ. ಬಸ್‌ಸ್ಟಾಂಡಿಗೆ ಹೋದರೆ ಸಾಕು, ಗಂಟೆಗೆ ನಾಲ್ಕು ಬಸ್ಸು ಸಿಕ್ಕುತ್ತೆ" ಎಂದೆ.

ನಾಲ್ಕು ಗಂಟೆಗ ನನ್ನನ್ನೆಬ್ಬಿಸಿದಳು. "ಥತ್ ! ಇಷ್ಟು ಬೇಗ ಯಾಕೆ ? ಐದು ಐದೂವರೆಗೆ ಏಳು ಸಾಕು" ಎಂದು ಮತ್ತೆ ಮಲಗಿದೆ. ಸರಿಯಾಗಿ ಆರೂವರೆಗೆ ಹಾಲಿನವನು ಬಂದು ಕೂಗಿದಾಗ, ಎಚ್ಚರವಾಯಿತು. ಏಳೂಮುಕ್ಕಾಲಿಗೆ ಉಪ್ಪಿಟ್ಟು ಕಾಫಿ ಸಿದ್ಧವಾಯಿತು. ಮನೆಯನ್ನೆಲ್ಲ ಸಾರಿಸಿ ಗುಡಿಸದೆ, ಬಾಗಿಲಲ್ಲಿ ರಂಗೋಲಿ ಇಡದೆ, ಹೋದರೆ, ಲಕ್ಷಣವಲ್ಲ, ಅಂತ ಅವಳು ಅದನ್ನು ಮಾಡುತ್ತಿದ್ದಾಗ, ನಾನು ಮಕ್ಕಳಿಗೆಲ್ಲ ತಿಂಡಿಕೊಟ್ಟು, ತಟ್ಟೆ ಪಾತ್ರೆ ಎಲ್ಲ ತೊಳೆದಿರಿಸಿದೆ. ಒಂಬತ್ತೂಕಾಲಾಯಿತು. ನನ್ನ ಮೂಗು ಕೊಂಚ ಸೋರುವುದಕ್ಕೆ ಷುರು. ಹೊಳೆ ಸ್ನಾನ ಮಾಡಬಹುದೋ ಬೇಡವೋ ಎಂದು ಹತ್ತುಗಂಟೆತನಕ ಚರ್ಚೆಮಾಡಿ, ಬೇಡ, ಎಂಬ ನಿರ್ಧಾರಕ್ಕೆ ಬಂದು, ಮನೆಯಲ್ಲೇ ಎಲ್ಲರೂ ಸ್ನಾನಮಾಡುವುದು, ಅದೇ ಸರಿ, ಹೋದಕಡೆ ತಂಟೆ ತಕರಾರು, ಎಂದು ನಿಶ್ಚಯಿಸಿ, ನೀರು ಕಾಯಿಸಿ, ಸ್ನಾನ ಮಾಡಿದೆ. ಅವಳ ಸ್ನಾನ ಮುಗಿಯುವುದರೊಳಗಾಗಿ ಹನ್ನೊಂದೂವರೆ. ಮಕ್ಕಳಿಗೆಲ್ಲ ನಾನೇ ಮೈ ತೊಳೆದೆ. ಹನ್ನೆರಡು.

ಹೊಟ್ಟೆ ತಾಳ ಬಿರುಸಾಯಿತು. ಉಪ್ಪಿಟ್ಟು ಯಾವ ಮೂಲೆಗೆ? ಅಡಿಗೆ ಊಟ ಮುಗಿಸಿಯೇ ಹೊರಡೋದು. ಹೋದಕಡೆ ಹಸಿವು ಹಸಿವು ಅಂತ ಸಿಕ್ಕಿದ್ದನ್ನೆಲ್ಲ ತಿನ್ನುವುದು ಮಕ್ಕಳ ಆರೋಗ್ಯಕ್ಕೆ ಕೇಡು, ಎಂದುಕೊಂಡೆವು. ಎರಡೂವರೆಗೆ ಅಡಿಗೆ ಊಟ ಮುಗಿಯಿತು. ಮೂರೂಕಾಲಿಗೆ ಪಾತ್ರೆ ಪದಾರ್ಥ ತೊಳೆದಿರಿಸಿದೆವು, ಇಬ್ಬರೂ ಸೇರಿ.

ಪ್ರೆಸ್‌ಗಿಸ್ ಮಾಡಿಕೊಂಡು, ನಾಲ್ಕಕ್ಕೆ ಸಿದ್ಧವಾದೆವು. ಮಕ್ಕಳನ್ನೆಲ್ಲ ಒಟ್ಟುಗೂಡಿಸಿದೆವು. ನಮ್ಮ ಮನೆಯಲ್ಲಿ, ನಾನೂ ಸೇರಿ, ಐದಿವೆ, ಲೆಕ್ಕ ಮಾಡಿದಾಗ, ಇದ್ದದ್ದು ನನ್ನನ್ನು ಬಿಟ್ಟು, ನಾಲ್ಕೇ. ನಡುವಣ ನಾರಾಯಣ, ಪತ್ತೆಯೇ ಇಲ್ಲ. ಗಾಬರಿಯಿಂದ ಅಲ್ಲಿ ಇಲ್ಲಿ ಹುಡುಕಿ, ಅವನ ಸ್ನೇಹಿತರ ಮನೆಗೆಲ್ಲ ಹೋಗಿ ವಿಚಾರಿಸಿ. ಅವನು ಹೋಗುತ್ತಿದ್ದ ನರ್ಸರಿ ಶಾಲೆಗೆ ಸೈಕಲ್ ಸವಾರಿ ಹೋಗಿಬಂದೆ. ಆಗ ಗೊತ್ತಾಯಿತು, ಅವನು ಬಚ್ಚಲುಮನೆಯಲ್ಲಿ ನಿದ್ದೆ ಮಾಡುತ್ತಿದ್ದ, ಅನ್ನೋದು.

ಗಂಟೆ ನಾಲ್ಕೂವರೆ. ಟಾಂಗಾಗಾಡಿ ಸಿಕ್ಕಿ ಅದರಲ್ಲಿ ಎಲ್ಲರೂ ಹತ್ತಿ ಕೂತಾಗ, ಐದಕ್ಕೆ ಹತ್ತು ನಿಮಿಷ. ಆ ಕುದುರೆ, ಚೌಕ ಚೌಕದಲ್ಲೂ ಸರ್ಕಸ್ ನಡೆಸಿ, ತಾನು ನಿತ್ಯ ನಿಲ್ಲುವ ಸ್ಟಾಂಡುಕಡೆ ತಿರುಗಿ, ಅಲ್ಲಿಂದ ವಾಪಸ್ ಬಂದು, ಬಸ್‌ಸ್ಟಾಂಡಿಗೆ ಹೋದದ್ದು, ಐದೂವರೆ.

ಟಾಂಗಾದವನಿಗೆ ಕೂಲಿ ಕೊಡುವುದಕ್ಕೆ ಅಂತ ಕಿಸೆಯಲ್ಲಿ ಕೈ ಇಟ್ಟಾಗ ತಿಳಿಯಿತು, ಪರ್ಸ್ ಮನೆಯಲ್ಲಿಯೇ ಇದೆ, ಎಂಬುದು. ಅವರನ್ನೆಲ್ಲ ಬಸ್‌ಸ್ಟಾಂಡ್‌ನಲ್ಲೇ ನಿಲ್ಲಿಸಿ, ನಾನು ಅದೇ ಟಾಂಗಾದಲ್ಲೇ ಮನೆಗೆ ಹೋದೆ. ಮನೆ ಬಾಗಿಲಲ್ಲಿ ತಿಳಿಯಿತು, ಬೀಗದ ಕೈ ಅವಳ ಹತ್ತಿರ, ಎಂಬುದು. ಸರಿ. ಅದೇ ಗಾಡೀಲೇ ಬಸ್‌ಸ್ಟಾಂಡಿಗೆ ಹೋಗಿ, ಅವಳ ಹತ್ತಿರದಿಂದ ಅದನ್ನು ಸಂಪಾದಿಸಿ, ಮನೆಗೆ ಹಿಂತಿರುಗಿ ಪರ್ಸ್ ಸಂಪಾದಿಸಿ, ಮತ್ತೆ ಮನೆಗೆ ಬೀಗಹಾಕಿ ಅದೇ ಗಾಡಿಯಲ್ಲೇ ಬಸ್‌ಸ್ಟಾಂಡಿಗೆ ಹೋದೆ. ಗಂಟೆ ಆರೂವರೆ.

ಪರ್ಸ್‌ನಲ್ಲಿದ್ದದ್ದು ನಾಲ್ಕೂವರೆ ರೂಪಾಯಿ. ಟಾಂಗಾದವನಿಗೆ ಕೂಲಿ ಐದು ಬಾರಿಗೆ ಸೇರಿ ಮೂರುಮುಕ್ಕಾಲು ರೂಪಾಯಿ ತೆತ್ತೆ, ಇಪ್ಪತ್ತು ನಿಮಿಷದ ಜಗಳದ ನಂತರ. ಇನ್ನು ಉಳಿದಿದ್ದದ್ದು ಹನ್ನೆರಡಾಣೆ. ಅದನ್ನ ಕೊಟ್ಟರೆ, ಎಲ್ಲರನ್ನೂ ಕೂರಿಸಿಕೊಂಡು ಮನೆ ತನಕ ಬಿಡುತ್ತೇನೆ ಅಂತ ಟಾಂಗಾದವನು ಒಪ್ಪಿದ್ದು ನಮ್ಮ ಪುಣ್ಯ.

ಏಳೂಕಾಲಿಗೆ ಮನೆ ಸೇರಿದೆವು.

19

ನಂ ಕ್ಲಬ್ಬಿನಲ್ಲಿ

—ಆನಂದ್

ಶನಿವಾರ ಕ್ಲಬ್ಬಿಗೆ ಹೋಗಿದ್ದೆ. ಶಾಮು ಸಿಕ್ಕಿದ. ಅವನು ವೈದ್ಯಕೀಯ ಕಾಲೇಜಿನಲ್ಲಿ ವೈದ್ಯನಾಗಿ ಕೆಲಸ ಮಾಡ್ತಿದಾನೆ. ನಾನು ಅವನನ್ನ ಸಮೀಪಿಸುವಾಗಲೇ ಅವನ ಮುಖದ ಮೇಲೆ ಒಂದು ತರಹ ಮುಗುಳ್ನಗೆ ಹರಡಿತು ! "ಏನೋ ಮರಿ, ಏನು ವಿಷಯ ?" ಅಂದೆ. ಶಾಮು ಅಂದ: "ನೋಡೋ, ಮೊನ್ನೆ ಒಬ್ಬ ಗೃಹಿಣಿ ಬಂದಳು. ಮೈ ಕೈ ನೋವು, ತಲೆ ಸಿಡಿತ, ಸುಸ್ತು, ಇತ್ಯಾದಿ ಇತ್ಯಾದಿ. ಡಾಕ್ಟರು ಪರೀಕ್ಷೆ ಮಾಡಿದಾಗ ಏನೂ ದೈಹಿಕವಾಗಿ ಕಾಯಿಲೆ ಕಂಡು ಬರಲಿಲ್ಲ. ನನ್ನ ಹತ್ತಿರ ಕಳಿಸಿದರು. ನಾನೂ ವಿವರವಾಗಿ ಪರೀಕ್ಷಿಸ್ದೆ. ನನಗೂ ಏನೂ ಕಂಡು ಬರಲಿಲ್ಲ. ಈಕೆಗೆ ಏನೋ ಮನಸ್ಸಿನಲ್ಲಿ ಆತಂಕ ಇದೆ; ಅದ್ದರಿಂದಲೇ ಈ ಬೇನೆಗಳೆಲ್ಲ ಅಂತ ವಿಚಾರ ಮಾಡಿದೆ. ಅಲ್ಲಿದ್ದ ಮೆಡಿಕಲ್ ವಿದ್ಯಾರ್ಥಿಗಳಿಗೂ ಹಾಗೇ ಹೇಳಿದೆ. 'ನಿಮ್ಮ ಯಜಮಾನ್ರಿಗೆ ಏನು ಕೆಲಸಾಮ್ಮಾ ?' ಅಂದೆ. 'ಫೈರ್ ಫೈಟಿಂಗ್ ಇಲಾಖೇಲೀ ಸಾರ್' ಅಂದಳು. ನನಗೆ ಜ್ಞಾನೋದಯ ಆಯ್ತು. ಇದರಿಂದ ಈಕೆಗೆ ಯಾವಾಗಲೂ (ಅಗ್ನಿ) ಭಯ; ಯಾವಾಗ ಗಂಡನಿಗೆ ಆಪತ್ತು ಬರುತ್ತೋ ಅಂತ ಹೆದರಿಕೆ ! ವಿದ್ಯಾರ್ಥಿಗಳಿಗೂ ತುಂಬಾ ಇಂಪ್ರೆಸ್ ಆಯ್ತು ನನ್ನ ವಾದ ! ಅಷ್ಟರಲ್ಲಿ ಆಕೆಗ ಏನನ್ನಿಸಿತ್ತೋ ! ಸಾರ್, ಅವರು ಫೈರ್ ಡಿಪಾರ್ಟ್‌ಮೆಂಟಲ್ಲಿ ಟೈಪಿಸ್ಟು, ಸಾರ್" ಅಂದಳು.

ವಿದ್ಯಾರ್ಥಿಗಳ ಜೊತೆ ನಾನು ನಗಲು ಶುರು ಮಾಡಿದೆ !"

20

ಇಂದುಮತಿ


(ಒಂದು ಪ್ರಯೋಗ)

—ಶಿವು

ತುಂಬಿದ ಬಸ್ಸಿನ ಯಾತ್ರೆಯ ಮುಗಿಸಿ
ಹನಿಯುತ್ತಿಹ ಸುರಿಮಳೆಯಲಿ ನೆನೆದು
ಬಾಡಿದ ಮುಖದಿಂ, ಸೊರಗಿದ ಮನದಿಂ
ಬಾಗಿಲ ಬೀಗವ ತೆರೆದಳು ಇಂದು,



ಸಂಜೆಯು ಕತ್ತಲು, ವಿದ್ಯುತ್ ಕಟ್ಟು
ಕ್ಯಾಂಡಲ್ ಬೆಳಕದು ಅಲುಗುತ್ತಿರಲು
ಗ್ಯಾಸಿನ ಮೇಲೆ ಕಾಫಿಯನಿಟ್ಟು
ವಿಧಿಯನೆ ಹಳಿದಳು ಇಂದುಮತಿ




ಸಾಕಾಯಿತು ಈ ಒಂಟಿಯ ಬಾಳಿದು
ರೇಗುವುದಕು ಸಹ ಯಾರಿಲ್ಲ
ಕಾಫಿಯು ಬಲು ಕಹಿ, ಸಕ್ಕರೆ ಸಾಲದು
ಕೂಗಾಡುವ ಇನಿಯನೆ ಎನಗಿಲ್ಲ


ಗಂಡನ ಗಳಿಸುವ ಮಾರ್ಗವೆ ತಿಳಿಯದು
ಗಂಡಿನ ಆಶೆಗೆ ಮಿತಿ ಇಲ್ಲ
ದಿನವಹಿ ದುಡಿಯುವ ಕೆರಿಯರ್ ತರುಣಿಗೆ
ಪತ್ರಿಕೆ ಬಿಟ್ಟರೆ ಗತಿ ಇಲ್ಲ

ಮುಡಿಯುಂಪ ತರುಣಿ—ಸುಂದರ ಮೆಲುನಗೆ
ಉದ್ದನೆ ಕೂದಲು—ದುಂಡು ಮುಖ
ಸರಸರ ಇಂಗ್ಲೀಷ್ ಉಲಿಯುವ ಚದುರೆಗೆ
ಬೇಕೆನಿಸಿದೆ—ಓಹ್—ಹೃದಯ ಸಖ!

ಬಾಳಿನ ಕೆಳೆತನ ಸರ್ವ ಪವಿತ್ರ
ವರದಕ್ಷಿಣೆ ಬರಿ ವಹಿವಾಟು
ಎನ್ನುವ ವಿಶಾಲ ಹೃದಯುದ ಮಿತ್ರ
ಬರೆಯಿರಿ—ಬಾಕ್ಸ್ ನಂ. ನೂರೆಂಟು




ಹೃದಯುದ ಕೂಗನು ಲೋಕಕೆ ತಿಳಿಸಿ
ಉರುಳಿತು ವಾರದ ಏಳು ದಿನ
ಉತ್ತರ ಬಂದಿತು ಅಂಚೆಯ ಕರ್ಟಸಿ
ತಣಿಸಲು ತವಕವ (ಇಂದುವಿನ !)



ವುಡ್‌ಹೌಸ್ ಓದುವ ಗಿಡ್ಡ ಆಸಾಮಿ
ಕಲಿಸುವೆ ದರ್ಶನ ಶಾಸ್ತ್ರವನು
ಜೀವನ ಸಖ್ಯದ ಕನಸಿನ ಪ್ರೇಮಿ
ಬಯುಸುವೆ ಭೇಟಿಯ ಕರುಣೆಯುನು

ಕಬ್ಬನ ಪಾರ್ಕಿನ ರೆಸ್ಟುರದಲ್ಲಿ
ರವಿವಾರ ಮುಂಜಾನೆ ಹತ್ತಕೆ ಬಂದು
ಕಾಯುವೆ ಮೂರನೆ ಟೇಬಲಿನಲ್ಲಿ
ಒಪ್ಪಿಗೆಯಾದರೆ, ಬನ್ನಿರಿ ಅಂದು


ಭೇಟಿಯ ಸಮಯಕೆ ತಾಸಿರುವಂತೆ
ಕಾಯುತ ಕುಳಿತಳು ನಮ್ಮ ರತಿ
ನೆರೆದಿಹ ಕಣ್ಗಳು ಸೆಳೆದಿರುವಂತೆ
ಮೋಹಕ ತರುಣಿ ಇಂದುಮತಿ



ಹತ್ತು ಘಂಟೆಗೆ ಬಂದನು ತರುಣ
ಮೆಲು ನಗೆಯೊಂದನು ಬೀರುತ್ತ
ಅಯ್ಯೋ ದೇವರೆ, ವಾವೆಯ ಅಣ್ಣ
ಚಿಕ್ಕಪ್ಪನ ಮಗ ಶ್ರೀನಾಥ

ಹೃದಯಾಂತರಾಳದಿಂ ಉಕ್ಕಿಬರುತಿಹ
ಅಳುವಿನಶ್ರು ಧಾರೆಯಲ್ಲಿ ಮಿಂದು
ಬಿಕ್ಕುತ್ತ ಕಣ್ಣೀರನೊರೆಸುತ್ತ ನೋಡಿದಳು
ಮೂಕ ವೇದನೆಯಿಂದ ತಂಗಿ ಇಂದು

ಕರುಣಾರ್ದ್ರ ದೃಷ್ಟಿಯಿಂ ನೋಡಿದನು ಶ್ರೀನಾಥ
ಮಿಡಿದುದಾತನ ಹೃದಯತಂತು
ಬಾಳುವೆಯ ಹಾದಿಯಲಿ ಅನುಭವಿಸಿದಾಘಾತ
ದನುಭವದ ನುಡಿಗಳನು ಪೇಳ್ದನಿಂತು



ಆಶೆ, ಮಮತೆ, ಮಹತ್ವಕಾಂಕ್ಷೆ
ಬರಿದೇ ತೊಳಲುವೆ ಹೇ, ತಂಗಿ
ಜೀವನದ ಚಕ್ರವ ನಿಲ್ಲದೆ ನಡೆಸುವ
ಕುದುರೆಯ ಮುಂದಣ ಮೂಲಂಗಿ

ಆಶೆಯ ನೆರವನು ಬಯಸದೆ ಕೆಚ್ಚಿದೆ
ಯಿಂದಲಿ ಬಾಳನು ಇದಿರಿಸುವ
ಮಹತ್ವಕಾಂಕ್ಷೆಯೆ ಇಲ್ಲದೆ, ಗುರಿಯನು
ಇತರರಿ ಗಾಗಿಯೆ ಸಾಧಿಸುವ

ಒಂಟಿಯ ಬಾಳನು ಜರೆವುದು ಸಲ್ಲ
ಮುಡಿಪಿಡು ಬಾಳನು ಪರಸೇವ
ಅಲ್ಲದೆ ಬಾಳದು ಒಂಟಿಯೆ ಅಲ್ಲ
ನಿನ್ನೊಡನಿಲ್ಲವೇ ಆ ದೇವ?

ಅಣ್ಣನ ಹಿತನುಡಿಗಳ ಪರಿಣಾಮ
ಅರಿತು ಇಂದುವಿನುದ್ವೇಗ
ನಗುಮುಖದಿಂದಲೆ ಬಾಳ ಸಂಗ್ರಾಮ
ವನೆದುರಿಸ ಹೊರಟಳು ಬಹು ಬೇಗ

ಕ್ರಿಕೆಟ್ ಹೀಗಾದರೆ !

— ದುರ್ವಿನೀತ

'ಪಂಗನಾಮ' ಎಂಬ ಪದವನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ ಎಂದು ಪಿ.ಯು.ಸಿ. ಟೆಕ್ಸ್ಟ್‌ನಲ್ಲಿ ಅಸೈನ್ಮೆಂಟ್ ಕೊಟ್ಟಿದ್ದಾರಂತೆ. ಅದಕ್ಕೆ ವಿದ್ಯಾರ್ಥಿಗಳು ಕೊಟ್ಟ ಉತ್ತರಗಳು ಎರಡೇ ಅಂತೆ.

(೧) ರಿಲಯನ್ಸ್ ಕಪ್ಪಿನಲ್ಲಿ ನಮಗೆ ಪಂಗನಾಮ.

(೨) ಪರೀಕ್ಷೆಯಲ್ಲಿ ಪಂಗನಾಮ ಖಂಡಿತ.

ಇದರಿಂದ ಒಂದು ಹೊಸ ಪ್ರಶ್ನೆ ಏಳುತ್ತದೆ ಎಂದು ನನ್ನ ಮಿತ್ರರು ಹೇಳುತ್ತಾರೆ ಹೇಗಿದ್ದರೂ ಪಂಗನಾಮ ದಕ್ಕಿದೆ. ಪರೀಕ್ಷೆ ವಿದ್ಯಾರಂಗಕ್ಕೆ ಸೇರಿದ್ದು. ರಿಲಯನ್ಸ್ ಕಪ್ ಕ್ರೀಡಾರಂಗಕ್ಕೆ ಸೇರಿದ್ದು. ವಿದ್ಯಾರಂಗದಲ್ಲಿರುವ ರೋಸ್ಟರ್ ಪದ್ಧತಿ ಕ್ರೀಡಾರಂಗಕ್ಕೇಕೆ ಕಾಲಿಡಬಾರದು ?

ಅದಕ್ಕೆ ನಾನಿಟ್ಟ ಮರುಪ್ರಶ್ನೆ ಕ್ರೀಡಾರಂಗಕ್ಕೆ ವಿದ್ಯಾರಂಗದ ಪದ್ಧತಿ ಅನ್ವಯಿಸುವುದು ಸರಿಯೆ ?

ಅವರ ವಾದ

ಏಕಲ್ಲ ? ವಿದ್ಯಾರಂಗವು ಪ್ರಜಾಪ್ರಭುತ್ವದ ಬುನಾದಿಗಲ್ಲು. ಅದಕ್ಕನ್ವಯವಾದದ್ದನ್ನು ಅಷ್ಟು ಮುಖ್ಯವಲ್ಲದ ಕ್ರೀಡಾರಂಗಕ್ಕೆ ಅನ್ವಯಿಸಿದರೆ ಆಗುವ ಪ್ರಗತಿಯಿಂದ ಯಾವ ಹಾನಿಯೂ ಆಗಲಾರದು.

ನನ್ನ ಸವಾಲು

ಹೇಗೆ ಅನ್ವಯಿಸುವುದು ?

ಅವರ ಉತ್ತರದ ಸಾರಾಂಶ

೧. ಕ್ರಿಕೆಟ್ಟಿಗೆ ಮುಖ್ಯವಾದದ್ದು ಹಣ. ಅದನ್ನು ಜಮಾಯಿಸಲು ಪ್ರಬಲ

ವಾದ ಸಂಸ್ಥೆ ಬೇಕು. ಆದುದರಿಂದ ಕ್ಲಬ್ಬಿನ ಡೈರೆಕ್ಟರುಗಳ ಪ್ರತಿನಿಧಿಗೆ ಟೀಮಿನಲ್ಲಿ ಸ್ಥಾನ ಅತ್ಯವಶ್ಯಕ.

೨. ಲೋಕವು ಕಾರ್ಮಿಕರ ಶ್ರಮದ ಮೇಲೆ ನಿಂತಿದೆ. ಪಿಚ್ ತಯಾರಿಸುವ, ನೀರು ಹಣಿಕಿಸುವ, ರೋಲರ್ ಎಳೆಯುವ, ಟಿಕೆಟ್ ಮಾರುವ, ಕಾವಲು ಕಾಯುವ, ಅಕೌಂಟ್ ಬರೆಯುವವರ ಪ್ರತಿನಿಧಿಗಳಿಗೆ ಟೀಮಿನಲ್ಲಿ ಸ್ಥಾನ ಅಗತ್ಯ.

೩. ಬ್ಯಾಟ್ ತಯಾರಿಸುವ, ಬಾಲ್ ಹೊಲಿಯುವ, ಪ್ಯಾಡ್ ಗ್ಲೋವ್ಸ್ ತಯಾರಿಸುವ, ಉಡುಪು ತಯಾರಿಸುವ, ಸ್ಕೋರ್ ತಯಾರಿಸುವವರ ಪ್ರತಿನಿಧಿ ಗಳಿಗೂಅಗತ್ಯವಾಗಿ ಸ್ಥಾನ ದಕ್ಕಬೇಕು.

೪. ಈ ಮೇಲ್ಕಂಡ ಎಲ್ಲರಿಗೂ ಹಣ ತೆರುವವರು ನೋಟಕರು. ಅವರ ಪ್ರತಿನಿಧಿಗಳಿಗೂ ಟೀಮಿನಲ್ಲಿ ಸ್ಥಾನ ದೊರೆಯಬೇಕು.

೫. ಟೀವಿ ತಯಾರಕರಿಗೂ, ಕೊಳ್ಳುಗರಿಗೂ ಟೀಮಿನಲ್ಲಿ ಸ್ಥಾನ ದೊರೆಯ ಬೇಕು.

ಇವೆಲ್ಲಕ್ಕೂ ಮುಖ್ಯವಾಗಿ ಪ್ರಾತಿನಿಧ್ಯ ದೊರಕಲೇ ಬೇಕಾದವರು ಜನತಾ ಪ್ರತಿನಿಧಿಗಳು. ಇವರ ಒಬ್ಬೊಬ್ಬ ಪ್ರತಿನಿಧಿಯನ್ನು ಜಿಲ್ಲಾ ಮಟ್ಟದಿಂದ ಆರಿಸಿ ಜಿಲ್ಲಾ ಕೇಂದ್ರಗಳಲ್ಲಿ ತರಬೇತಿ ಕೊಡಬೇಕು.

ನಾನು ಗಾಬರಿಯಾಗಿ ಕೇಳಿದೆ

ನಮ್ಮ ರಾಷ್ಟ್ರದಲ್ಲಿ ಎಷ್ಟು ಜಿಲ್ಲೆಗಳಿವೆ ? ಅದರಲ್ಲಿ ಒಂದೊಂದಕ್ಕೆ 'ಎ' 11+4 'ಬಿ' 11+4 ಟೀಂಗಳಾದರೆ ಯಾರು, ಯಾಕೆ, ಹೇಗೆ ತಿಳಿಯುವು ದಾದರೂ ಹೇಗೆ ?

ಉತ್ತರ ಥಟ್ಟನೆ ಬಂತು

ಇದಕ್ಕೆ ಕ್ಯಾಪಿಟೇಷನ್ ಪದ್ಧತಿಯನ್ನು ಅನುಸರಿಸಬೇಕು. ಆಳುವವರು ನಾಮಕರಣ ಮಾಡಿದ ಟೀಂ ಸದಸ್ಯರನ್ನು ಬಿಟ್ಟು, ಉಳಿದವರನ್ನು ಆರಿಸಲು ಸ್ಥಳೀಯ ಆಡಳಿತಗಾರರು ಕ್ಯಾಪಿಟೇಷನ್ ಶುಲ್ಕವನ್ನು ವಸೂಲು ಮಾಡಲು ಅವಕಾಶವಿರಬೇಕು.

ನಾನು ಕೇಳಿದೆ

ಹೀಗಾದರೆ ಕ್ರೀಡೆಯ ಗತಿಯೇನು ?

ಉತ್ತರ

ದೇಶದ ದೇವಾಲಯುಗಳಾದ ಡ್ಯಾಂಗಳು, ಕಾರ್ಖಾನೆಗಳು. ಆಸ್ಪತ್ರೆಗಳು ಇವನ್ನು ನಡೆಸುವ ವಿದ್ಯಾರ್ಹತೆ ಪಡೆಯಲು ಇರುವ ಸಂಸ್ಥೆಗಳಲ್ಲಿ ಈ ಪದ್ಧತಿ ಯಶಸ್ವಿಯಾಗಿ ನಡೆದುಕೊಂಡು ಹೋಗುತ್ತಿದೆ ಮತ್ತು ಆ ಸಂಸ್ಥೆಗಳ ಸಂಖ್ಯೆ ಸರ್ವತೋಭಿಮುಖವಾಗಿ ಪ್ರಗತಿ ಹೊಂದುತ್ತಿದೆ. ಕ್ರೀಡಾಂಗಣಗಳಲ್ಲಿ ಆ ಪದ್ಧತಿ ಹೆಚ್ಚು ಪ್ರಗತಿಯನ್ನು ಸಾಧಿಸುವುದರಲ್ಲಿ ಸಂದೇಹವೇ ಇಲ್ಲ.

ನನ್ನ ಮಿತ್ರರನ್ನು ನಾನು ತರಾಟೆಗೆ ತೆಗೆದುಕೊಂಡೆ

ಕ್ರೀಡೆಯಲ್ಲಿ ಸಾಧನೆಯೇ ಮುಖ್ಯ. ಪರದೇಶಗಳಿದಿರಲ್ಲಿ ನಾವು ತಲೆ ತಗ್ಗಿಸ ಬೇಕಾದೀತು,

ಅವರು ಹೇಳಿದರು

ವಿದ್ಯಾಭ್ಯಾಸದಲ್ಲಿ ಕಲಿಕೆಯೇ ಮುಖ್ಯ. ಕಾರ್ಖಾನೆಗಳಲ್ಲಿ ದಕ್ಷತೆಯೇ ಮುಖ್ಯ, ಚುನಾವಣೆಗಳಲ್ಲಿ ವಿಚಾರವರರು ನಿರ್ಭೀತಿಯಿಂದ ಮತ ಚಲಾಯಿಸಿದ್ದಕ್ಕೆ ಬೆಲೆ ಬರಬೇಕಾದುದು ಮುಖ್ಯ ಆಡಳಿತದಲ್ಲಿ ಭ್ರಷ್ಟಾಚಾರವಿಲ್ಲದಿರುವುದೇ ಮುಖ್ಯ , ಹಾಗೆಯೇ ಕ್ರೀಡೆಯಲ್ಲಿ, ಪ್ರಜಾಪ್ರಭುತ್ವದ ತತ್ವಗಳನ್ನು ಅನುಸರಿಸುವುದೇ ಮುಖ್ಯ. ಹೀಗೆ ಒಳ್ಳೆಯ ಆಟಗಾರರೇ ಆಡುತ್ತಾ ಹೋದರೆ ಕೋಟ್ಯಾಂತರ ಜನಗಳು— ಕ್ರೀಡೆಯ ಗಂಧವನ್ನೇ ಅರಿಯದವರು, ಹಣ ತೆರುವವರು—ಎಂದು ಕ್ರೀಡಾಂಗಣದಲ್ಲಿ ಸ್ಥಾನ ಪಡೆಯಲು ಸಾಧ್ಯ ?

ನಾನು ಹೇಳಿದೆ

ನೀವು ಹೇಳುವುದು ಜನಪರ, ವೈಜ್ಞಾನಿಕ ಮತ್ತು ಸತ್ಯ ಮೂಢನಂಬಿಕೆ ಗಳನ್ನು ಅದು ಕಳೆಯುತ್ತದೆ. ಆದರೆ ಎಲ್ಲೋ ನಾತ ಬರುತ್ತದೆ !

27

ಅ(ಸ)ರ್ಥಕೋಶ

— ಸ. ಹಾಲಪ್ಪ

ಫುಟ್‌ಪಾತ್ :

ಪಾದವಿಡಲೂ ಸಾಧ್ಯವಿಲ್ಲದಂತೆ ಅತಿಕ್ರಮಿಸಲ್ಪಟ್ಟ ದಾರಿ.

ಆಶ್ವಾಸನೆ :

ರಾಜಕಾರಣಿಯ ಅಕ್ಷಯಪಾತ್ರೆ.

ಸೈಡ್ ವಿಂಗ್ :

ನಟರ ರಕ್ಷಣಾ ಟ್ರೆಂಚ್.

ನಶ್ಯ :

ಕೈ ಮೇಲಾಗಿಯೇ ಪಡೆಯುವ ದಾನ.

ಅಳಿಯ :

ಹತ್ತನೇ ಗ್ರಹ.

ಫಲಾಹಾರ ಮಂದಿರ :

ಹಣ್ಣುಗಳ ಹೊರತು ಉಳಿದ ತಿನಿಸುಗಳಿರುವ ಹೋಟೆಲು.

ಉಡುದಾರ :

ಇಂಡಿಯನ್ ಬೆಲ್ಟ್.

ಕಾನ್ವೆಂಟ್ ಕನ್ನಡ

—ಜಿ. ರಾಮಣ್ಣ ಆಲಿಟ್ಟಿ

"ಎಷ್ಟು ಸಾರಿ ಹೇಳಿದ್ದೇನೆ ನಿನಗೆ ? ನೀನು ಮಾತನಾಡುವಾಗ ನಿಧಾನವಾಗಿ ಮಾತನಾಡಬೇಕು. ಅಕ್ಕಪಕ್ಕದವರಿಗೆ ಕೇಳಬಾರದೂಂತ......

ಮಾಮೂಲಿಯಂತೆ ಮೂರನೆ ಕ್ಲಾಸಿನ ಮಗಳಿಗೆ ಸಿಡುಕಿನಿಂದಲೇ ಹೇಳಿದೆ. ಕಾರಣವಿಷ್ಟೆ ನಾವು ಕುಳಿತಿದ್ದ ಬಸ್ಸು ಜಯನಗರದಿಂದ ಮೆಜೆಸ್ಟಿಕ್‌ಗೆ ಹೋಗುತ್ತಿತ್ತು. ಬಸ್ಸಿನಲ್ಲಿ ಕಣ್ಣಾಡಿಸಿದ ಏಳು ವರ್ಷದ ನನ್ನ ಮಗಳು ಜಯಶ್ರೀ "ನಿರೋಧ್ ಬಳಸಿರಿ" ಎಂಬ ಬೋರ್ಡನ್ನು ನೋಡಿ "ಅಪ್ಪಾ ನನಗೆ ನಿರೋಧ್ ಕೊಡಿಸು" ಎಂದು ಕೇಳಿದಾಗ ನಮ್ಮ ಸೀಟಿನ ಹಿಂದೆ ಮತ್ತು ಮುಂದೆ ಕುಳಿತಿದ್ದವರು ನಮ್ಮತ್ತ ಗಮನ ಹರಿಸಿ ಮುಸಿ ಮುಸಿ ನಕ್ಕರು.

ಮೆಜೆಸ್ಟಿಕ್‌ಗೆ ಹೋಗುವ ತನಕ ಜಯಶ್ರೀ ಬಾಯಿ ಬಿಡಲಿಲ್ಲ. ಕಾನ್ವೆಂಟ್ ಶಾಲೆಯಲ್ಲಿ ಓದುತ್ತಿದ್ದ ಕಾರಣ ಕನ್ನಡ ಪರದೇಶಿ ಭಾಷೆಯಾಗಿ ಅವಳು ಕನ್ನಡದ ಬೋರ್ಡುಗಳನ್ನು ಓದಿ ಕನ್ನಡದ ಕೊಲೆ ಮಾಡುತ್ತಿದ್ದಾಗ ಅದನ್ನು ತಡಯಲು ನಾನು ಬಹಳ ಶ್ರಮ ಪಡಬೇಕು !

ಮೆಜೆಸ್ಟಿಕ್‌ನಲ್ಲಿ ಬಸ್ಸಿನಿಂದ ಇಳಿದು ಕೆಂಪೇಗೌಡ ಸರ್ಕಲ್‌ಗೆ ಬಂದೆವು.

"ಅಯ್ಯೋ ಭಾವನ ಎಂದರೇನಪ್ಪ ?" ಜಯಶ್ರೀ ಪ್ರಾರಂಭಿಸಿದಳು.

"ಆರ್ಯ ಭವನ್ ಕಣೇ, ಅದೊಂದು ಸ್ವೀಟ್ ಸ್ಟಾಲ್" ಎಂದು ಅಲ್ಲಿಗೆ ಕರೆದುಕೊಂಡು ಹೋಗಿ ಕೋಲ್ಡ್ ಬಾದಾಮಿ ಹಾಲು ಕೊಡಿಸಿದೆ.

"ಸಂತಾಪ ಅಂದರೇನಪ್ಪ ?"

"ಸಂತಾಪ ಅಲ್ಲ ಕಣೇ, ಸಂತೋಷ್. ಅದು ಸಿನಿಮಾ ಮಂದಿರದ ಹೆಸರು" ಎಂದು ಮುಂದೆ ನಡೆದೆ. ಅಲ್ಲಿ ಚಾರ್ಜ್ ಕೊಟ್ಟು ಸಿನಿಮಾ ನೋಡಿದವರಿಗೆ 'ಸಂತಾಪ'ವಾದರೂ ಆಗಬಹುದು ಎಂದು ಮನಸ್ಸಿನಲ್ಲಿಯೇ ಅಂದುಕೊಂಡೆ.

"ಜಾಗ ಮುಚ್ಚಿದ ಮಗ" ಎಂದರೇನಪ್ಪ ?"

"ಜಗ ಮೆಚ್ಚಿದ ಮಗ ಕಣೇ, ಅದು ಸಿನಿಮಾದ ಹೆಸರು. ನೋಡು, ನೀನು ಕನ್ನಡ ಸರಿಯಾಗಿ ಓದಲು ಕಲಿತ ಮೇಲೇನೇ ನಾನು ನಿನ್ನನ್ನು ಹೊರಗೆ ಕರೆದು ಕೊಂಡು ಬರುವುದು" ಎಂದು ಹೇಳಿ ಮಾತನಾಡದಿರಲೆಂದು ಎರಡು ಬಬ್ಬಲ್ ಗಮ್ ಕೊಡಿಸಿದ್ದಾಯಿತು.

ಸಂಗಂ ಥಿಯೇಟರಿನ ಬಳಿ ಬಂದಾಗ ಒಂದು ಬೋರ್ಡನ್ನು ನೋಡುತ್ತಾ ಪುಟ್ಟಿ ನಿಲ್ಲಬೇಕೆ ?

"ತಾಜಾ ಹೆಣ್ಣಿನ ರಸ ಕೊಡಿಸಪ್ಪಾ"

"ತಾಜಾ ಹಣ್ಣಿನ ರಸ ಕಣೇ, ಕೊಡಿಸ್ತೀನಿ. ಆದರೆ ಒಂದು ವಿಷಯ, ನೀನು ಮನೆಗೆ ತಲಪುವ ತನಕ ದಾರಿಯಲ್ಲಿ ಕಾಣುವ ಬೋರ್ಡುಗಳನ್ನು ಓದಬಾರದು."

"ಐ ವಾಂಟ್ ಟು ಇಂಪ್ರೂ ಕನ್ನಡ"

"ಡೋಂಟ್ ಇಂಪ್ರೂ ಕನ್ನಡ, ಯು ಇಂಪ್ರೂ ಯುವರ್‌ಸೆಲ್ಫ್" ಎಂದು ಜೋರಾಗಿ ನಡೆದು ಬಸ್ ಸ್ಟಾಪಿಗೆ ಬಂದು ಬಸ್ಸು ಹಿಡಿದು ಮನೆ ತಲಪಿದಾಗ 'ಉಸ್ಸಪ್ಪ' ಎಂದು ಉಸಿರು ಬಿಡುವಂತಾಯಿತು !

"ಬಾ ಸರಸು, ಓಡೋಡಿ ಬಂದಿದಿ. ಏನ್ಬೇಕಾಗಿತ್ತು ?"

"ಅಮ್ಮಾ ಹೇಳಿದಳು, ನಿಮ್ಮನೆ ರೇಡಿಯೋನ ಸ್ವಲ್ಪ ಜೋರಾಗಿ ಹಾಕ ಬೇಕಂತೆ. ಮನೇಗೆ ಯಾರೋ ಬಂದಿದಾರೆ. ಎಷ್ಟೊತ್ತಾದರೂ ಹೋಗ್ತಾನೇ ಇಲ್ಲ"

ಕ್ರಿ. ಶ. 2003ರಲ್ಲಿ ರಾಜ್ಯದಲ್ಲಿ ಇದೇ ಪರಿಸ್ಥಿತಿ ಇದ್ದರೆ ?

—ಜಿ. ಎಸ್. ಜಿ.

(A statistical approach)

ಸಮಸ್ಯೆ ಸರ್ಕಾರದ ಮನವಿಯಂತೆ ಪ್ರತಿಯೊಬ್ಬ ಸರ್ಕಾರಿ ನೌಕರನೂ ತನ್ನ ಸಂಬಳದಲ್ಲಿ ಶೇ. 10ರಷ್ಟು ಭಾಗವನ್ನು ಉಳಿತಾಯ ಮಾಡಿ N S.C. ಗಳನ್ನು ಕೊಂಡರೆ ಅವನಿಗೆ ಕ್ರಿ.ಶ. 2003ರಲ್ಲಿ ದೊರೆಯುವ ಮಾಸಿಕ ವೇತನವೆಷ್ಟು ?

ಅಂದಾಜು ಲೆಕ್ಕಾಚಾರ (An estimation)

ಅ) ಪೂರ್ವ ಕಲ್ಪನೆಗಳು (Assumptions)

1. 1947ರಿಂದ 1987ರವರೆಗಿನ ರಾಜ್ಯದ ಆರ್ಥಿಕ ಸಾಮಾಜಿಕ ಶೈಕ್ಷಣಿಕ ಕ್ಷೇತ್ರಗಳಲ್ಲಿನ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡಿದೆ. ಬೆಲೆ ಏರಿಕೆಯೂ, ಮಂತ್ರಿಗಳ ಸಂಖ್ಯೆಗಳ ಏರಿಕೆಯೂ ಅನುಲೋಮ ಅನುಪಾತ (Direct proportionality) ದಲ್ಲಿರುವುದನ್ನು ಗಮನಿಸಿದೆ. ಆದರೆ ಚಲಿಸುವ ಸಮತಲದಲ್ಲಿದ್ದುಕೊಂಡು ಅದೇ ಸಮತಲದ ಆಗುಹೋಗುಗಳ ಲೆಕ್ಕಾಚಾರ ಮಾಡುವುದು ಕ್ಲಿಷ್ಟವಾಗುವುದರಿಂದಲೂ (ಉದಾಹರಣೆಗೆ ಖಗೋಳದ ಸಮಸ್ಯೆಗಳನ್ನು ಬಿಡಿಸುವಾಗ ಭೂಮಿಯನ್ನು ಅಚಲ, ಸ್ಥಿರ ಎಂದು ಭಾವಿಸಲಾಗುತ್ತದೆ), ಅವೈಜ್ಞಾನಿಕವಾಗುವುದರಿಂದಲೂ, ಲೆಕ್ಕಾಚಾರದ ಅನುಕೂಲತೆಗಳಿಗಾಗಿ 2003ನೆ ಇಸವಿಯವರೆಗೆ ಈ ಕೆಳಗಿನವುಗಳು ಯಥಾ ಸ್ಥಿತಿಯಲ್ಲಿರುತ್ತವೆ ಎಂದು ಭಾವಿಸಲಾಗಿದೆ.

(i) ಸರ್ಕಾರ (ii) ಮಂತ್ರಿಮಂಡಲ. (iii) ಮಂತ್ರಿಗಳ ಸಂಖ್ಯೆ. (iv) ಸರ್ಕಾರಿ ನೌಕರರ ಸಂಖ್ಯೆ. (v) ಪರಿಷತ್ತುಗಳು, ಮಂಡಲಗಳು, ಅವುಗಳ ಮುಖ್ಯಸ್ಥರು. (vi) ಪ್ರಗತಿ. (vii) ಜನಸಂಖ್ಯೆ. (viii) ಬೆಲೆಗಳು.

2. ಯಥಾ ಸ್ಥಿತಿ ಮುಂದುವರೆಯುವುದರಿಂದ, ಶೇ. 10 ಉಳಿತಾಯ ಯೋಜನೆ ಮತ್ತು ಅದನ್ನು ಐದೈದು ವರ್ಷಗಳ ನಂತರ ಬಡ್ಡಿ ಸಹಿತ ತುಂಬಿ ಕೊಡಲು ಅದಕ್ಕಾಗಿ ಪುನಃ ಉಳಿತಾಯ ಮಾಡುವ ಹೊಣೆ ನೌಕರನದಾಗುತ್ತದೆ. ಇದು 2003ರವರೆಗೆ ಮುಂದುವರಿಯುತ್ತದೆ.

3. ಲೆಕ್ಕಾಚಾರದ ಅನುಕೂಲಕ್ಕಾಗಿ ಕೆಳಗಿನ ಅಂಕಿ ಅಂಶಗಳನ್ನು ಅಂದಾಜು ಮಾಡಲಾಗಿದೆ.

ನೌಕರನ ದರ್ಜೆಗಳು :— ಅ ಆ ಇ ಈ.

ಆಯಾ ದರ್ಜೆಗಳಲ್ಲಿ ನೌಕರರ ಸಂಖ್ಯೆ ಕ್ರಮವಾಗಿ 5,000, 10,000, 45,000 ಮತ್ತು 40,000—ಅಂದರೆ ಒಟ್ಟು ನೌಕರರು ಒಂದು ಲಕ್ಷ. ಆಯಾ ದರ್ಜೆಯ ನೌಕರನ ಸರಾಸರಿ ಸಂಬಳ ಕ್ರಮವಾಗಿ 4,000 ರೂ., 3000 ರೂ., 2,000 ರೂ. ಮತ್ತು 1,000 ರೂ. ಗಳಿರಲಿ.

(ಅ) ಅಂದಾಜು ಲೆಕ್ಕಾಚಾರ (Estimation)

1. ಉಳಿತಾಯ 1988ರ ಜನವರಿಯಿಂದ ಲೆಕ್ಕ ಹಾಕಲಾಗಿದೆ. ಮಾದರಿಗಾಗಿ 1988, 1993, 1998, 2003 ನೆ ಇಸವಿಗಳನ್ನು ತೆಗೆದು ಕೊಳ್ಳಲಾಗಿದೆ. ಇದರಂತೆ 1989, 1994 ಹೀಗೆ ಐದೈದು ವರ್ಷಗಳ ಹಂತ ಗಳನ್ನು ಓದುಗನೇ ಲೆಕ್ಕ ಹಾಕಿಕೊಳ್ಳಲು ಕೆಳಗಿನ ಮಾದರಿ ಲೆಕ್ಕಾಚಾರ ಸಹಾಯ ಮಾಡುತ್ತದೆ:

ದರ್ಜೆ	ನೌಕರನ ಸಂಖ್ಯೆ	ಒಟ್ಟು ಮಾಸಿಕ ಸಂಬಳ (ಕೋಟಿ ರೂ.ಗಳಲ್ಲಿ)	ಶೇ. 10ರಂತೆ ಮಾಸಿಕ ಉಳಿತಾಯ (ಕೋಟಿ ರೂ.ಗಳಲ್ಲಿ)
ಅ.	5,000	2	0.2
ಆ.	10,000	1	0.3
ಇ.	45,000	9	0.9
ಈ.	40,000	4	0.4
ಒಟ್ಟು	1,00,000	18	1.8

1088ರ ಕೊನೆಯಲ್ಲಿ ಒಟ್ಟು ಉಳಿತಾಯ $1.8 \times 12 = 21.6$ ಕೋಟಿ ರೂ.

2. 1993 ರಿಂದ 2003ರವರೆಗೆ ಸರ್ಕಾರ ತನ್ನ ನೌಕರನಿಗೆ ಅವನು ಮಾಡಿದ ಉಳಿತಾಯವನ್ನು ಬಡ್ಡಿ ಸಹಿತವಾಗಿ ಹಿಂತಿರುಗಿಸಬೇಕಾಗುತ್ತದೆ. ಇದರಿಂದ 100 ರೂ. ಉಳಿಸಿದವನಿಗೆ 5 ವರ್ಷದ ನಂತರ 200 ರೂ. ಗಳನ್ನು ಕೊಡಬೇಕಾಗುತ್ತದೆ. ಆದ್ದರಿಂದ ಸರ್ಕಾರ ಕೆಳಗಿನ ಕ್ರಮವನ್ನು ಅನುಸರಿಸಲೇ ಬೇಕಾಗುತ್ತದೆ. ಏಕೆಂದರೆ ರಾಜ್ಯದಲ್ಲಿ 1988ರ ಸ್ಥಿತಿಯೇ ಮುಂದುವರೆದಿರುತ್ತದೆ.

ವರ್ಷ	ಸರ್ಕಾರ ನೌಕರನಿಗೆ ಕೊಡಬೇಕಾದ ಬಾಕಿ (ಕೋಟಿ ರೂ.ಗಳಲ್ಲಿ)	ನೌಕರನು ಮಾಡಬೇಕಾದ ಉಳಿತಾಯ		
		ಪ್ರಗತಿಗಾಗಿ	ತನಗೆ ಬರಬೇಕಾದ ಬಾಕಿಗಾಗಿ	ಒಟ್ಟು
		ಶೇ.	ಶೇ.	ಶೇ.
1993	$21.6 \times 2 = 43.2$	10	20	30
1998	$21.6 \times 6 = 129.6$	10	60	70
2003	$21.6 \times 14 = 302.4$	10	140	150

ಅಂದರೆ 2003ನೆ ಇಸವಿಯ ಹೊತ್ತಿಗೆ ಪ್ರತಿಯೊಬ್ಬ ಸರ್ಕಾರಿ ನೌಕರನು ರಾಜ್ಯದ ಪ್ರಗತಿಯನ್ನು ಯಥಾ ಸ್ಥಿತಿಯಲ್ಲಿ ಮುಂದುವರೆಸಲು ತಾನು ಮಾಡಿದ ಉಳಿತಾಯದ ಹಣವನ್ನು ಬಡ್ಡಿ ಸಮೇತ ಹಿಂದಕ್ಕೆ ಪಡೆಯಲು ತಾನು ಯಾವ ಸಂಬಳವನ್ನೂ ಪಡೆಯದೆ ತನಗೆ ಬರಬಹುದಾದ ಸಂಬಳದ ಅರ್ಧ ಭಾಗವನ್ನು ಉಳಿತಾಯ ಮಾಡಬೇಕಾಗುತ್ತದೆ. 2003ನೇ ಇಸವಿಯಲ್ಲಿ 1,000ರೂ. ಮಾಸಿಕ ವೇತನ ಇದ್ದವನು 1.500ರೂ. ಗಳನ್ನು ಪ್ರತಿ ತಿಂಗಳೂ ಉಳಿತಾಯ ಮಾಡಬೇಕಾಗುತ್ತದೆ.

ಇದನ್ನು ಹೀಗೆಯೇ 2008ನೇ ಇಸವಿಯುವರೆಗೆ ವಿಸ್ತರಿಸಲು ನೋಡಿದೆ. ಯಾಕೋ ತಲೆ ಸುತ್ತಿದಂತಾಯಿತು. **B. P.** ತೋರಿಸಿಕೊಳ್ಳಲು ಹಣಕ್ಕೆ ಬದಲು ಹಳೆಯ 10ರೂ. ಯ ಒಂದು **N.S.C.** ಹಿಡಿದು ಡಾಕ್ಟರ ಬಳಿ ನಡೆದೆ.



ಅರರೇ ! ಇವನ್ನ ಕುಡ್ದು ಇಲ್ಲ್ಯಾಕ್ ಬಂದ್ರು ?
ಅಲ್ಲೇ ಅನುಭೋಗಿಸ್ಕೊಬಹುದಿತ್ತಲ್ಲಾ !

ದಿಬ್ಬಣದ ಊಟ

—"ಗುರುವ"

ಚೆನ್ನಪ್ಪ ಗೌಡರು, ಸಿದ್ದಪ್ಪ ಹಾಗೂ ನಾರಪ್ಪ ಎಂದರೆ ದೇಹಗಳು ಮೂರು ; ಮನಸ್ಸು, ಬುದ್ಧಿ, ಕೆಲಸ ಒಂದೇ. ಮದುವೆ ಮುಂತಾದ ಯಾವುದೇ ಸಮಾರಂಭವಿರಲಿ, ಕರೆಯಲಿ ಬಿಡಲಿ, ಇವರು ಮಾತ್ರ ಜನಸೇವೆಗೆಂದು ಅಲ್ಲಿ ಹಾಜರ್. ಬಂದು ಉಂಡು ಮಾತ್ರ ಹೋಗುತ್ತಿದ್ದರೆಂದಲ್ಲ. ಕೆಲವೊಮ್ಮೆ ಅಲ್ಲಿ ನಡೆಯುತ್ತಿದ್ದ ಜಗಳ, ಜಂಜಾಟಗಳನ್ನು ಮೂವರು ಕೂಡಿ ಅಷ್ಟೇ ಜಾಣತನದಿಂದ ನಿವಾರಿಸುತ್ತಿದ್ದರು.

ಹೀಗೇ ಒಂದು ಮದುವೆಗೆ ಹೋಗಿದ್ದರು ಈ ತ್ರಿಮೂರ್ತಿಗಳು. ಮಂಗಳಾ ಕ್ಷತೆ ಮುಗಿದು, ದಯಮಾಡಿಸಿದ್ದ ಶ್ರೀಗಳೂ ಆಶೀರ್ವದಿಸಿ ಹೊರಟು ಹೋಗಿದ್ದರು. ಆದರೆ ದಿಬ್ಬಣದ ಊಟಕ್ಕೆ ಕರೆ ಮಾತ್ರ ಇನ್ನೂ ಬಂದಿರಲಿಲ್ಲ. ಇಷ್ಟು ಕ್ಲೂ ಸಿಕ್ಕಿದ್ದು ಸಾಕು. ಏನೋ ಸಮಸ್ಯೆ ಇದೆ ಎಂದು ಮನೆಯ ಯಜ ಮಾನನನ್ನು ಹುಡುಕಿ,

"ಯಾಕ್ರೋ ತಮ್ಮ ಊಟ ತಡ. ಬಂದ ಜನ ಉಂಡು ಊರು ಮುಟ್ಟ ಬೇಡವೆ ?" ಎಂದರು.

"ಅನ್ನ, ಸಾರು ಸ್ವಲ್ಪ ಮಾಡುವುದಿದೆ. ಸದ್ಯ ಕರೆಯುತ್ತೇವೆ."

"ಅನ್ನ, ಸಾರು ಈಗ ಮಾಡುವುದು ಎಂದರೇನು ? ಪರ ಊರಿಂದ ಬಂದವರು ಹಸಿದು ಕಂಗಾಲಾಗಿದ್ದಾರೆ. ಮೊದಲೇ ಎಲ್ಲಾ ತಯಾರಿ ಮಾಡಿ ಕೊಂಡಿರಬೇಕಪ್ಪ."

"ಸ್ವಲ್ಪ ಈ ಕಡೆ ಬನ್ನಿ. ನಿಜ ಹೇಳಬೇಕೆಂದರೆ ತಡವಾಗುತ್ತಿರುವುದು ಈ ಕಾರಣಕ್ಕೆ ಅಲ್ಲ. ಶ್ರೀಗಳು ಬಂದಿದ್ದರಿಂದ ನಮ್ಮ ನಿರೀಕ್ಷೆ ಮೀರಿ ಜನ ಬಂದಿದ್ದಾರೆ. ಸದ್ಯ ಅನ್ನ ಹಾಗೂ ಸಾರು ಮಾಡಲು ಇಟ್ಟಾಗಿದೆ, ಅಲ್ಲಿ ನೋಡಿ. ಮಾಲ್ದಿಗೆ ಬೆಲ್ಲ ಮತ್ತು ಕಡಲೆ ಹಿಟ್ಟು ಹಚ್ಚಿ, ಬೂಂದಿಗೆ ಸಕ್ಕರೆ ಹಾಕಿ ಅವನ್ನು ಬೆಳೆಸುವ ಕೆಲಸವೂ

ನಡೆದಿದೆ. ಸ್ವಲ್ಪ ಕಾಲಾವಕಾಶ ಮಾತ್ರ ಬೇಕು. ನೀವೇ ನಿಂತು ನಮ್ಮನ್ನು ಪಾರು ಮಾಡಬೇಕು" ಎಂದರು.

"ಅಯ್ಯೋ ದಡ್ಡ, ನಾವೇನು ಹೊರಗಿನವರೇ ? ಮೊದಲೇ ಏಕೆ ಹೇಳಲಿಲ್ಲ ಈ ಒಳಗಿನ ಗುಟ್ಟು ? ಒಂದು ಕೆಲಸ ಮಾಡು. ಈ ಮಾಲ್ದಿ–ಲಾಡು ಬೆಳೆಸುವ ಕೆಲಸವನ್ನು ಮೊದಲು ನಿಲ್ಲಿಸು. ಆ ಸಿದ್ದ ಮತ್ತು ನಾರನನ್ನು ಇಲ್ಲಿ ಕರಿ. ಏ ತಮ್ಮಾ, ಈ ದೇವರ ಕೋಣೆಯಲ್ಲಿ ಬಾ ಸ್ವಲ್ಪ" ಎಂದು ಒಳಗೆ ಸೇರಿಕೊಂಡರು.

ಹೊರಗೆ ಬಿಸಿಲಲ್ಲಿ ನಿಂತ ಜನರು ಊಟದ ಕರೆಗೆ ಕಾಯುತ್ತಿದ್ದಂತೆ ಇತ್ತ ದೇವರ ಕೋಣೆಯಲ್ಲಿ ನಮ್ಮ ತ್ರಿಮೂರ್ತಿಗಳು ತಮ್ಮ ಕಾರ್ಯ ಪ್ರಾರಂಭಿಸಿದ್ದರು. ಅನಂತರ ಕೋಣೆಯ ಬಾಗಿಲು ತೆಗೆದು ಹೊರ ಬಂದು, "ಎಲ್ಲಾ ಅಡಿಗೆ ಚೆನ್ನಾಗಿದೆ. ಎಲೆ ಅಡಿಕೆ ಅನಂತರ ತಿನ್ನುವ. ಮೊದಲಿಗೆ ಬಂದ ಪುಣ್ಯಾತ್ಮರದು ಊಟವಾಗಲಿ" ಎಂದು ಎಲ್ಲರನ್ನು ಊಟಕ್ಕೆ ಹೊರಡಿಸಿದರು.

ಊಟಕ್ಕೆ ವ್ಯವಸ್ಥೆ ಮಾಡಿದ್ದ ಸ್ಥಳಕ್ಕೆ ಜನರು ನುಗ್ಗುತ್ತಿದ್ದಂತ ಅಥವಾ ಮಾಯದಿಂದಲೋ ಗೌಡರ ಚೇಲಾಗಳಾದ ಸಿದ್ದಪ್ಪ ಮತ್ತು ನಾರಪ್ಪ ಆಗಲೇ ಒಳಗೆ ಬಂದು ಊಟಕ್ಕೆ ಹಾಕಿದ್ದ ಎರಡೂ ಸಾಲಿನಲ್ಲಿ ಮೊದಲನೆಯವರಾಗಿ, ಎದರು ಬದರು ಕುಳಿತಿದ್ದರು. ಗೌಡರು ಮಾತ್ರ ಊಟಕ್ಕೆ ಕೂಡದೆ ಇತರರಿಗೆ ಊಟ ಮಾಡಿಸುವ ಕೆಲಸಕ್ಕೆ ನಿಂತರು.

ಎಲೆ ಹಾಕಿ, ಲೋಟ ಇಟ್ಟು ನೀರನ್ನೂ ಹಾಕಿ. ಉಪ್ಪು, ನೆಂಚಿಗೆ ಹೀಗೆ ಒಂದೊಂದೇ ಬರಲು ಪ್ರಾರಂಭವಾದವು. ಅತ್ತಿತ್ತ ಓಡಾಡುತ್ತಾ ಗೌಡರು,

"ಬೇಗ, ಬೇಗ ಬಡಿಸಿರಿ. ಬಹಾಳ ಸೆಖೆ ಇಲ್ಲಿ. ಮಳೆ ಬರಬಹುದು" ಎಂದು ಅವಸರದ ಕರೆ ನೀಡುತ್ತಿದ್ದಂತೆ ಇಬ್ಬರು ತರುಣರು ಮಾಲ್ದಿ ತುಂಬಿದ ಪಾತ್ರೆಗಳನ್ನು ಹೊತ್ತು ತಂದು. ಇನ್ನೇನು ನೀಡಲು ಪ್ರಾರಂಭಿಸಬೇಕು ಎನ್ನುತ್ತಿದ್ದಂತೆ, ಗೌಡರು ಎತ್ತಿದ ಧ್ವನಿಯಲ್ಲಿ, "ಏ ತಮ್ಮಾ ಏನೋ ಅದು" ಎನ್ನುತ್ತಾ ಧಾವಿಸಿ ಬಂದರು. ಗೌಡರ ಗದ್ದಲಕ್ಕೆ ಹೆದರಿದ ಹುಡುಗರು. "ಮಾಲ್ದಿ. ಗೌಡ್ರೇ" ಎಂದರು.

"ಮಾಲ್ದಿ. ಈ ಬಿಸಿಲಲ್ಲಿ, ಸೆಖೆಯಲ್ಲಿ ಯಾರು ತಿನ್ನುತ್ತಾರೆ. ಇದನ್ನು ಖಂಡಿತ ನೀಡಬೇಡ. ವಾಪಾಸ್ ಇಟ್ಟು ಮುಂದಿನ ಐಟಂ ತಾ"—ಎಂದು

ಅಪ್ಪಣೆ ಮಾಡಿದವು. ಸಾಲಿನ ಮೊದಲಿಗೇ ಕುಳಿತಿದ್ದ ಸಿದ್ದಪ್ಪ ಹೇಳಿದ

"ಗೌಡ್ರು. ಬೇಕಾದವರು ಉಣ್ಣುತ್ತಾರೆ. ನೀಡಲಿ ಬಿಡಿ" ಅವನು ಹೀಗೆ ಅಂದಷ್ಟೇ ತಡ, ಗೌಡರು ಅವನ ಮೇಲೆ ಹಾರಿ ಬಿದ್ದರು.

"ಲೇ ಸಿದ್ದ. ಇದೊಂದೇ ಮದುವೆ ಏನಲೇ ? ಈ ಎರಡು ತಿಂಗಳಲ್ಲಿ ಒಂದು ನೂರು ಮದುವೆ ಮಾಡಿ ಸಿಹಿ ತಿಂದಿದ್ದೀಯಾ. ಸಾಕಾಗಿಲ್ಲವೇನು ? ಉಣ್ಣುತ್ತಾನಂತೆ. ಕತ್ತೆ ಜಾತಿಗೆ ಸೇರಿದವ ನೀನು. ನೀಡಪ್ಪ. ಈ ಸೆಖೆಯಲ್ಲಿ ಅದಾವ ದನ ತಿನ್ನುತ್ತದೆ ಎಂದು ನೋಡಲಿ ಈ ಸಿದ್ದ ಎಂದರು.

ಇಷ್ಟೆಲ್ಲಾ ಆದ ಮೇಲೆ ಯಾರು ತಿನ್ನುತ್ತಾರೆ ? ಮಾಲ್ದಿ ನೀಡಲು ಬಂದಾಗ ಎಲ್ಲರೂ "ಬೇಡ, ಬೇಡ. ಸ್ವಲ್ಪ, ಸ್ವಲ್ಪ ಎಂದು ಶಾಸ್ತ್ರಕ್ಕೆ ಹಾಕಿಸಿಕೊಂಡರು. ನೀಡಿ ಉಳಿದ ಮಾಲ್ದಿಯ ಪಾತ್ರೆಗಳನ್ನು ತೆಗೆದುಕೊಂಡು ಒಳಗೆ ಹೋದ ಹುಡು. ಗರು ಮತ್ತೆ ಬರುವಾಗ ಲಾಡು ತುಂಬಿದ ಪಾತ್ರೆಗಳನ್ನು ಹೊತ್ತು ತಂದರು. ಇವರನ್ನು ನೋಡುತ್ತಿದ್ದಂತೆ ಗೌಡರು ಕೋಪದಿಂದ ಬೆಂಕಿಯಾದರು.

"ಲೇ ತಮ್ಮಾ, ಮತ್ತೆ ಇದೇನು ತಂದಿರೋ ? ನಿಮಗೆ ಹೇಳುವವರು, ಕೇಳುವವರು ಯಾರೂ ಇಲ್ಲವಾ ? ಈ ಸೆಖೆಯಲ್ಲಿ ಇದೆಲ್ಲಾ ತಿನ್ನಿಸಿ ಯಾರನ್ನ ಸಾಯಿಸಬೇಕೆಂದು ಮಾಡಿದ್ದೀರಿ ? ಕರಿ ಇಲ್ಲಿ ಆ ಮದುವೆ ಮಾಡುವವನನ್ನು" ಎಂದು ಆರ್ಭಟಿಸಿದರು. ಅಂತೂ ಇವತ್ತು ಈ ಗೌಡ ನಮ್ಮ ಊಟಕ್ಕೆ ಕಲ್ಲು ಹಾಕಿದ ಎಂದು ಬೈದುಕೊಂಡರೂ ಯಾರಿಗೂ ಗೌಡರಿಗೆ ಹೇಳಲು ಧೈರ್ಯ ಬರಲಿಲ್ಲ. ಮೇಲೆ ಸಂಕೋಚ ಬೇರೆ. ನಾರಪ್ಪನೇ ಸ್ವಲ್ಪ ಧೈರ್ಯ ತಂದುಕೊಂಡು ಹೇಳಿದ,

"ಗೌಡ್ರೆ. ಹೀಗ ಮಾಲ್ದಿನೂ ಬೇಡ, ಲಾಡೂನು ಬೇಡ ಎಂದರೇನು ? ನಾವು ಉಣ್ಣ ಬೇಕೋ ಬೇಡವೋ ? ಮತ್ತೊಮ್ಮೆ ಗೌಡರಿಗೆ ಸಿಟ್ಟು ಏರಿತು.

"ಲೇ ನಾರ, ದನಕ್ಕೆ ಹುಟ್ಟಿದವನೇ. ಈ ಬಿಸಿಲಿನಲ್ಲಿ ಲಾಡು ತಿಂದು ಹಾಸ್ಪತ್ರೆ ಸೇರಬೇಕೆಂದು ಮಾಡಿದ್ದೀಯಾ ? ಆಗಲೇ ಮಳೆಗಾಲ ಪ್ರಾರಂಭವಾಗಿ ಅಲ್ಲಲ್ಲಿ ಕಾಲರ ಬೇರೆ ಬಿದ್ದಿದೆ. ಮಳೆ ಬಂದ ಕೂಡಲೇ ಬಿತ್ತಲಿಕ್ಕೆ ಪ್ರಾರಂಭಿಸಬೇಕು. ಈ ಆರಂಭದ ದಿನದಲ್ಲಿ ಹೊಟ್ಟೆ ಕೆಡಿಸಿಕೊಂಡು ಮಲಗಲು ಜನ ನಿನ್ನಂತೆ ಲಫಂಗರು, ಫಟಿಂಗರು ಅಂತ ಮಾಡಿದ್ದೀಯಾ. ತಿನ್ನಿ ಸ್ವಾಮಿ, ತಿನ್ನಿ. ಈ ನಾರನ ಮಾತು ಕೇಳಿ ಲಾಡು ತಿಂದು ಹಳ್ಳ ಹಿಡಿದು ಕೂಡುವಿರಂತೆ" ಎಂದು ಗದರಿಸಿದರು.

"ಮದುವೆ ಅಂತ ಬಂದ ಮೇಲೆ ಸಿಹಿ ಊಟ ಮಾಡಬೇಡವೆ ?"


"ಮಾಡಬೇಕು. ಏನೋ ಕಲ್ಯಾಣ ಕೆಲಸ. ಆಶೀರ್ವಾದ ಅಂತ ನಾಲ್ಕು ಅಕ್ಕಿ ಕಾಳು ಹಾಕಿ, ಉಡುಗೊರೆ ಅಂತ ನೀಡಿದ್ದಾರೆ. ಪ್ರಸಾದ ಅಂತ ಒಂದು ಅನ್ನ ಸಾರು ಉಂಡು ಹೋದರೆ ಆಯಿತು. ಅದು ಬಿಟ್ಟು ಸಿಕ್ಕಿದ್ದೆಲ್ಲಾ ತಿಂದು ಏನಾದರೂ ಮಾಡಿಕೊಂಡು ಇಡೀ ಪ್ರಾಂತದ ಆರೋಗ್ಯ ಕೆಡಿಸುವುದು. ಅನಂತರ ಮದುವೆ ಮಾಡಿದವರನ್ನು ದೂರುವುದು. ತಮ್ಮಾ, ಇದೆಲ್ಲಾ ವಾಪಾಸ್ ತಗೊಂಡು ಹೋಗಿ ಒಂದು ಅನ್ನ ಸಾರು ತಗೊಂಡು ಬಾ. ಮಜ್ಜಿಗೆ ಇದ್ದರೆ ಅದನ್ನೂ ತಾ. ಬಿಸಿಲಿನಲ್ಲಿ ಮಜ್ಜಿಗೆ ಅನ್ನ ಮೈಗೆ ಒಳ್ಳೆಯದು" ಎಂದು ಸಾರ್ವಜನಿಕ ಆರೋಗ್ಯದ ಬಗ್ಗೆ ಒಂದು ಪ್ರವಚನವನ್ನೇ ನೀಡಿದರು. ಮತ್ತೆ ಸಿದ್ದಪ್ಪನೇ ನಡುವೆ ಪ್ರವೇಶ ಮಾಡಿ,

"ಹೇಗೂ ತಂದಾಗಿದೆ. ಬೇಕಾದವರು ಹಾಕಿಸಿಕೊಳ್ಳಲಿ ಬಿಡು, ಗೌಡ" ಎಂದು ಅಂಗಲಾಚಿದ. ಗೌಡರು ಅವನನ್ನು ಒಮ್ಮೆ ನೋಡಿ,

"ಹಾಕಪ್ಪ. ತಿಂದರೆ ಈ ಕತ್ತೆ ನನ್ನ ಮಕ್ಕಳೇ ತಿನ್ನಬೇಕು. ಹಾಕು, ಈ ನಾರ ಮತ್ತು ಸಿದ್ದರಿಗೆ ಮೊದಲು ಹಾಕು. ತಿಂದು ಸಾಯಲಿ" ಎಂದರು. ಲಾಡು ತಂದಾತ ಮತ್ತೊಮ್ಮೆ ಬಗ್ಗಿ ಎದ್ದನೇ ವಿನಃ ಯಾರೂ ಬೇಕೆಂದು ಕೇಳಲಿಲ್ಲ. ಬಂದ ಲಾಡೂ ಕೂಡ ಹಾಗೇ ಹಿಂದಕ್ಕೆ ಹೋಯಿತು.

ಅನ್ನ, ಸಾರು ತಂದಾಗ ಮದುವೆ ಮನೆಯ ಯಜಮಾನನೂ ಓಡಿ ಬಂದು, "ಸ್ವಾಮಿ, ಗೌಡರೆ. ಮಾಲ್ದಿ ಲಾಡು ಉಳಿದರೆ ಇಟ್ಟು ತಿನ್ನಬಹುದು. ಅನ್ನ, ಸಾರು ಉಳಿದರೆ ಕೆಟ್ಟು ಹೋಗುತ್ತದೆ. ಜನ ಹಸಿದಿದ್ದಾರೆ. ಇದನ್ನಾದರೂ ಉಣ್ಣಲಿ ಬಿಡಿ" ಎಂದು ಕೈ ಮುಗಿದು ಕೇಳಿಕೊಂಡ.

"ನೀನುಂಟು, ನಿನ್ನ ಬೀಗರುಂಟು. ಏನಾದರೂ ಮಾಡಿಕೊಳ್ಳಿರಿ. ನನಗೆ ಸ್ವಲ್ಪ ಎಲೆ ಅಡಿಕೆ ಕಳುಹಿಸಿಕೊಡು" ಎಂದು ಹೊರಗೆ ಬಂದು ಕುಳಿತರು.



ಶುಭಾಶಯಗಳೊಂದಿಗೆ

REGISTERED No. BGW–180

